# ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



Scan For Digital Colourful Hampi Times E-paper



www.hampitimes.com
epaper.hampitimes.com

CALL US : 9448633038

Email us Your Advertisement Content to : hampitimes@gmail.com



ಸಂಪುಟ:01 Volume:01 • ಸಂಚಿಕೆ:255 Issue:255 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 06.03.2024 06.03.2024 • ಬುಧವಾರ Wednesday • ಪುಟ:04 Page:04 • ಬೆಲೆ:2 Rs:2







## ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಶೋಭಾಕೃತ

06–03–2024 – ಬುಧವಾರ

| | |
|---|---|
| ತಿಥಿ | : ಏಕಾದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಪೂರ್ವಾಷಾಡ |
| ಯೋಗ | : ವ್ಯತಾಪತಾ |
| ಕರಣ | : ಭವ |
| ಸೂರ್ಯೋದಯ | : 06:47:07 |
| ಸೂರ್ಯಾಸ್ತ | : 18:31:17 |
| ರಾಹು | : 12:38–14:06 |
| ಯಮಘಂಡ | : 08:13–09:42 |
| ಗುಳಿಕ | : 11:10–12:28 |

## ತುಂಗಭದ್ರಾ ನೀರಿನ ಮಟ್ಟ



ಮಂಗಳವಾರ : 05–03–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1586.18 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 885 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 8.123 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1603.23 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 8039 ಕ್ಯುಸೆಕ್ |
| ಸಾಮರ್ಥ್ಯ | 25.990 ಟಿಎಂಸಿ |






# ವಸ್ತುನಿಷ್ಠ ವರದಿಗಳು ಬದಲಾವಣೆಗೆ ಪ್ರೇರಣೆ

## ಕನ್ನಡ ವಿವಿ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಡಾ.ಎಸ್. ವೈ. ಸೋಮಶೇಖರ್ ಅಭಿಮತ

## ಪತ್ರಕರ್ತರು ಪೂರ್ವಗ್ರಹ ಪೀಡಿತರಾಗದೇ ಸಮಾಜದ ಬದಲಾವಣೆಗೆ ಮಾರ್ಗದರ್ಶಕರಾಗಬೇಕು

■ **ಹಂಪಿ ಟೈಮ್ಸ್ ಹೊಸಪೇಟೆ**

ಪತ್ರಿಕೋದ್ಯಮದಲ್ಲಿ ಮಾತು, ಬರವಣಿಗೆ ಅತ್ಯಂತ ಪ್ರಮುಖವಾಗಿದ್ದು, ಜೊತೆಗೆ ತಾಂತ್ರಿಕ ಕೌಶಲ್ಯಗಳ ಪರಿಣಿತಿಯನ್ನು ಹೊಂದಿದಾಗ ಮಾಧ್ಯಮ ಕ್ಷೇತ್ರದಲ್ಲಿ ಯಶಸ್ಸು ಹೊಂದಲು ಸಾಧ್ಯ ಎಂದು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥರಾದ ಡಾ.ಎಸ್. ವೈ. ಸೋಮಶೇಖರ್ ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ ನುಡಿಕಟ್ಟಡದಲ್ಲಿ ಹಮ್ಮಿಕೊಂಡಿದ್ದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಹಾಗೂ ಬೆಂಗಳೂರಿನ ಆಚಾರ್ಯ ಇನ್ಸ್‌ಟಿಟ್ಯೂಟ್ ಆಫ್ ಗ್ರಾಜ್ಯುವೇಟ್ ಸ್ಟಡೀಸ್ ಇವರ ಸಹಯೋಗದಲ್ಲಿ ವಿದ್ಯುನ್ಮಾನ ಮಾಧ್ಯಮಗಳಲ್ಲಿ ಸಂವಹನ ಮತ್ತು ತಾಂತ್ರಿಕ ಕೌಶಲ್ಯಗಳ ಒಂದು ದಿನದ ತರಬೇತಿ ಕಾರ್ಯಾಗಾರದ ಅಧ್ಯಕ್ಷತೆವಹಿಸಿ ಮಾತನಾಡಿದರು. ಪತ್ರಕರ್ತರು ಪೂರ್ವಗ್ರಹ ಪೀಡಿತರಾಗಿ ಸಿದ್ಧಾಂತಗಳಿಗೆ ಜೋತು ಬೀಳಬಾರದು. ಅದರ ಬದಲಿಗೆ ಜನಸಾಮಾನ್ಯರಿಗೆ ತಿಳಿಸುವ ರೀತಿಯಲ್ಲಿ ಮಾರ್ಗದರ್ಶನ ಮಾಡುವಂತಾವರಾಗಬೇಕು. ಪತ್ರಕರ್ತರಾದವರು ವಸ್ತುನಿಷ್ಠವಾಗಿ ಸುದ್ದಿ ಮಾಡಬೇಕು. ಪತ್ರಿಕೋದ್ಯಮ ಕಲಿಯುವ ವಿದ್ಯಾರ್ಥಿಗಳು



ಹೆಚ್ಚಾಗಿ ಪ್ರಾಯೋಗಿಕ ಕಲಿಕೆಯಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳಬೇಕು ಇದರಿಂದ ಉತ್ತಮ ಕೌಶಲ್ಯ ಜ್ಞಾನ ಹೊಂದಲು ಸಾಧ್ಯವಾಗುತ್ತದೆ. ಪತ್ರಿಕೋದ್ಯಮ ಕಲಿತವರಿಗೆ ಕೇವಲ ಮಾಧ್ಯಮಗಳಲ್ಲದೆ ಮಾಹಿತಿ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿಯೂ ಹೆಚ್ಚಿನ ಅವಕಾಶಗಳಿವೆ ಇದಕ್ಕೆ ಉತ್ತಮ ಬರವಣಿಗೆ, ಭಾಷಾಜ್ಞಾನ ತುಂಬಾ ಮುಖ್ಯ ಎಂದರು.

ಬೆಂಗಳೂರಿನ ಆಚಾರ್ಯ ಇನ್ಸ್‌ಟಿಟ್ಯೂಟ್ ಆಫ್ ಗ್ರಾಜ್ಯುವೇಟ್ ಸ್ಟಡೀಸ್‌ನ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥರಾದ ಪ್ರೇಮಾವತಿ ಮಾತನಾಡಿ, ಪತ್ರಿಕೋದ್ಯಮದಲ್ಲಿ ತಾಂತ್ರಿಕ ಪರಿಣಿತಿ ಹೊಂದಿದರೆ ಹೆಚ್ಚು ಬೆಳೆಯಲು ಸಾಧ್ಯ. ಮೂಲಭೂತವಾಗಿ ಯಾವುದೇ ವಿಷಯದಲ್ಲಿ ಸಾಮಾನ್ಯ ಕಲಿಕೆ ಎನ್ನುವಂತದ್ದು ತುಂಬಾ ಮುಖ್ಯವಾಗಿರುತ್ತದೆ. ಮಾಧ್ಯಮದ ವಿದ್ಯಾರ್ಥಿಗಳಿಗೆ ಆತ್ಮಸ್ಥೈರ್ಯ ಹೆಚ್ಚಾಗಿರಬೇಕು, ಇದರ ಜೊತೆಗೆ ಹೆಚ್ಚು ಓದುವುದರಿಂದ ಬರವಣಿಗೆಯಲ್ಲಿಯು ಯಶಸ್ಸು ಹೊಂದಬಹುದು. ಪತ್ರಿಕೋದ್ಯಮ ಕಲಿಯುವುದರೊಂದಿಗೆ ಉತ್ತಮ ಭಾಷೆ ಮತ್ತು ತಾಂತ್ರಿಕ ಜ್ಞಾನ ಹೊಂದಿದರೆ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಹಲವು ಅವಕಾಶಗಳಿವೆ ಎಂದರು.

ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಅಧ್ಯಾಪಕರಾದ ಡಾ. ಲೋಕೇಶ ಎಸ್. ಕೆ. ಪ್ರಾಸ್ತಾವಿಕವಾಗಿ ಮಾತನಾಡಿದರು. ಉಪನ್ಯಾಸಕ ಬಸವರಾಜ ಬಿರಾದರ್ ಮತ್ತು ಆರ್ಯ ಮಾತನಾಡಿದರು. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಅಧ್ಯಾಪಕರಾದ ಪದ್ಮಾವತಿ .ಕೆ ವಂದಿಸಿದರು. ಛಾಯಾಗ್ರಾಹಕರಾದ ಅಭಿರೂಪ್, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ದ್ವಿತೀಯ ವರ್ಷದ ವಿದ್ಯಾರ್ಥಿ ಶಿವಾನಂದ ನಿರೂಪಿಸಿದರು, ವಿದ್ಯಾರ್ಥಿಗಳು ಇದ್ದರು.

# ಕಲಬುರ್ಗಿಯಲ್ಲಿ ವಿಶ್ವಕರ್ಮ ರಾಜ್ಯಮಟ್ಟದ ಕಾರ್ಯಕ್ರಮ

## ವಿಜಯನಗರ ಜಿಲ್ಲಾ ಅಧ್ಯಕ್ಷ ಬಿ.ಜಿ.ಬಡಿಗೇರ ಹೇಳಿಕೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಅಖಿಲ ಕರ್ನಾಟಕ ವಿಶ್ವಕರ್ಮ ಮಠಾಧಿಪತಿಗಳ ಮತ್ತು ಸ್ವಾಮೀಜಿಗಳ ರಾಜ್ಯಮಟ್ಟದ ಸಂಘಟನಾ ವೇದಿಕೆಯ ಉದ್ಘಾಟನಾ ಕಾರ್ಯಕ್ರಮ ಮಾ.11 ರಂದು ಕಲಬುರ್ಗಿಯ ಶ್ರೀವಿರಭದ್ರೇಶ್ವರ ದೇವಸ್ಥಾನದ ಸಭಾ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾದ ವಿಜಯನಗರ ಜಿಲ್ಲಾ ಅಧ್ಯಕ್ಷ ಬಿ.ಜಿ.ಬಡಿಗೇರ ತಿಳಿಸಿದರು.



ವಿಶ್ವಕರ್ಮ ಸಮಾಜದ ಪರಮಪೂಜ್ಯರು, ಹಿಂದುಳಿದ ವರ್ಗಗಳ ಸಮಾಜದ ಸ್ವಾಮೀಜಿಗಳು, ವಿಶ್ವಕರ್ಮ ಮಹಾಸಭಾದ ರಾಜ್ಯಧ್ಯಕ್ಷ ಕೆ.ಪಿ.ನಂಜುಂಡಿ, ಕಲಬುರಗಿಯ ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ವಿವಿಧ ರಾಜಕೀಯ ಮತ್ತು ಸಮಾಜದ ಮುಖಂಡರ ಜೊತೆಗೆ ರಾಜ್ಯಹಂತದ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ. ವಿಶ್ವಕರ್ಮ ಮಹಾಸಭಾದ ಜಿಲ್ಲಾ ಮತ್ತು ತಾಲೂಕ ಹಂತದ ಪದಾಧಿಕಾರಿಗಳು, ಸಮಸ್ತ ಸಮಾಜದ ಬಂಧುಗಳು ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಕೋರಿದ್ದಾರೆ.

# ಆನೆಗೊಂದಿ ಉತ್ಸವಕ್ಕೆ ಹೆಸರು ನೋಂದಾಯಿಸಿ

■ **ಹಂಪಿ ಟೈಮ್ಸ್ ಕೊಪ್ಪಳ**

ಮಾರ್ಚ 11 ಮತ್ತು 12ರಂದು ನಡೆಯಲಿರುವ ಆನೆಗೊಂದಿ ಉತ್ಸವದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಲಿಚ್ಚಿಸುವ ಕೊಪ್ಪಳ ಜಿಲ್ಲಾ ವ್ಯಾಪ್ತಿಯ ಆಸಕ್ತ ಕಲಾವಿದರು, ಕಲಾತಂಡಗಳು ಅಗತ್ಯ ದಾಖಲೆಗಳು ಮಾ.7 ರೊಳಗೆ ಅರ್ಜಿಗಳನ್ನು ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾಡಳಿತ ಭವನ, ಕೊಪ್ಪಳ ಕಚೇರಿಗೆ ಸಲ್ಲಿಸಬೇಕು ಎಂದು ಸಹಾಯಕ ನಿರ್ದೇಶಕ ಕೊಟ್ರೇಶ ಮಾರಬನಳ್ಳಿ ತಿಳಿಸಿದ್ದಾರೆ.






# ತಪ್ಪದೇ ಪಲ್ಸ್ ಪೋಲಿಯೋ ಹನಿ ಹಾಕಿಸಿ

## ಸಂಸದ ವೈ. ದೇವೇಂದ್ರಪ್ಪ ಹೇಳಿಕೆ। 5 ವರ್ಷದೊಳಗಿನ ಮಕ್ಕಳಿಗೆ ಲಸಿಕೆ ಹಾಕಿಸಿ ರೋಗ ಮುಕ್ತರನ್ನಾಗಿಸಿ



■ **ಹಂಪಿ ಟೈಮ್ಸ್ ಹರಪನಹಳ್ಳಿ**

ತಾಲೂಕಿನ ಅರಸೀಕೆರೆ ಗ್ರಾಮದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಭಾನುವಾರದಂದು ಸಂಸದರಾದ ವೈ.ದೇವೇಂದ್ರಪ್ಪ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕೆ ಹಾಕುವ ಮೂಲಕ ಚಾಲನೆ ನೀಡಿದರು.

ಸಂಸದ ವೈ. ದೇವೇಂದ್ರಪ್ಪ ಮಗುವಿಗೆ ಪಲ್ಸ್ ಪೋಲಿಯೋ ಹನಿ ಹಾಕಿ ಚಾಲನೆ ನೀಡಿ ಮಾತನಾಡಿ ಪ್ರತಿಯೊಬ್ಬರೂ ತಮ್ಮ 5 ವರ್ಷದೊಳಗಿನ ಮಕ್ಕಳಿಗೆ ತಪ್ಪದೇ ಪಲ್ಸ್ ಪೋಲಿಯೋ ಲಸಿಕೆ ಹನಿ ಹಾಕಿಸಿ ರೋಗ ಮುಕ್ತರನ್ನಾಗಿ ಮಾಡಬೇಕು.

ಹುಟ್ಟಿನಿಂದ 5 ವರ್ಷದೊಳಗಿನ ತಮ್ಮ ಮಕ್ಕಳಿಗೆ ಪಲ್ಸ್ ಪೋಲಿಯೋ ಲಸಿಕೆಯನ್ನು ಹಾಕಿಸುವುದು ಪ್ರತಿಯೊಬ್ಬ ತಂದೆ ತಾಯಿಯ ಜವಾಬ್ದಾರಿಯಾಗಿದೆ, ಒಂದು ವೇಳೆ ಪೋಷಕರು ತಮ್ಮ ಮಕ್ಕಳಿಗೆ ಪೋಲಿಯೋ ಲಸಿಕೆ ಹನಿಯನ್ನು ಹಾಕಿಸದಿದ್ದಲ್ಲಿ ತಮ್ಮ ಮಕ್ಕಳು ಅಂಗ ವಿಕಲರಾಗುತ್ತಾರೆ, ಆದ್ದರಿಂದ ಪೋಷಕರು ತಪ್ಪದೇ ಪೋಲಿಯೋ ಲಿಸಿಕೆಯನ್ನು ಹಾಕಿಸಿ.

ಇಂದು ಮಾರ್ಚ್ 03 ಇಂದಿನಿಂದ 6 ರ ವರೆಗೆ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ರಾಷ್ಟ್ರಾದ್ಯಂತ ಹಮ್ಮಿಕೊಳ್ಳಲಾಗಿದೆ.

ಆರೋಗ್ಯ ಇಲಾಖೆಯವರು ಸಹ ಪ್ರತಿಯೊಂದು ಮನೆ ಮನೆಗೆ ತೆರಳಿ ಹುಟ್ಟಿನಿಂದ 5 ವರ್ಷದೊಳಗಿನ ಮಕ್ಕಳಿಗೆ ತಪ್ಪದೇ ಪೋಲಿಯೋ ಹನಿಯನ್ನು ಹಾಕುವಂತಹ ಕೆಲಸವನ್ನು ಮಾಡಬೇಕು.

ಪ್ರತಿಯೊಬ್ಬರೂ ತಮ್ಮ ಮಕ್ಕಳಿಗೆ ಪಲ್ಸ್ ಪೋಲಿಯೋ ಹನಿ ಹಾಕಿಸಿ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಮುಖಂಡರರಾದ ಪ್ರಶಾಂತ್ ಪಾಟೇಲ್, ಆರೋಗ್ಯ ಇಲಾಖೆಯ ಸಿಬ್ಬಂದಿಗಳಾದ ಡಾ.ಸುಜ್ಞಾನ,ಡಾ. ಕಾವ್ಯ, ಸೂಪರಡೆಂಟ್ ಪ್ರೇಮಲೀಲಾ, ಬಾಲಚಂದ್ರ, ಕಣುವಪ್ಪ, ರಮೇಶ್, ರೇಖಾ,ಮಂಜುನಾಥ್, ಜ್ಞಾನದೇವ, ಸಿಂಧು,ಅನಿತ್,ವೈಶಾಕ್ ಪಾಟೀಲ್, ಪೋಷಕರು ಹಾಗೂ ಮಕ್ಕಳು ಹಾಜರಿದ್ದರು.

## ವಚನ ಅರಿವು

### ಹುಚ್ಚು ಬಿಡಬೇಕು

**ಮರ್ತ್ಯದ ಮನುಜರು ತಾವು ಸತ್ಯರು ಸತ್ಯರು ಎನುತಿಪ್ಪರು,**
**ಮತ್ತೆ ಮತ್ತೆ ಮರಳಿ, ಮಲಮೂತ್ರ ಕೀವಿನಕೊಣದ**
**ಉಚ್ಚೆಯ ಬಚ್ಚಲ ಮೆಚ್ಚಿ,**
**ಹುಚ್ಚುಗೊಂಡು ತಿರುಗುವ ಕತ್ತೆ ಮನುಜರ ಮೆಚ್ಚರು**
**ನಮ್ಮ ಶರಣರು, ಅಪ್ಪಣ್ಣಪ್ರಿಯ ಚೆನ್ನಬಸವಣ್ಣ.**
**– ಹಡಪದ ಲಿಂಗಮ್ಮ**

ಭೂಮಿಯ ಮೇಲಿನ ಮನುಜರು ಮಾತಿಗೊಮ್ಮೆ ತಾವು ಸತ್ಯವಂತರು, ಶೀಲವಂತರು ಎಂದು ನಂಬಿಸುವ ಪ್ರಯತ್ನ ಮಾಡುತ್ತಲೇ ಇರುತ್ತಾರೆ. ಆದರೆ ಸತ್ಯ ಮಾತ್ರ ಅವರಲ್ಲಿರುವುದಿಲ್ಲ. ತಮ್ಮನ್ನು ತಾವು ನೋಡಿಕೊಂಡಾಗ, ತಮ್ಮ ತಪ್ಪುಗಳು ತಮಗೆ ಗೊತ್ತಾದಾಗ, ತಮ್ಮ ಆತ್ಮ ವಿಮರ್ಶೆ ಮಾಡಿಕೊಂಡರೆ ತಾವು ಎಷ್ಟರಮಟ್ಟಿಗೆ ಶುದ್ಧರು, ಸತ್ಯವಂತರು, ಶೀಲವಂತರು ಎಂಬುದು ತಿಳಿಯುತ್ತದೆ. ತಮ್ಮ ಮನಸ್ಸಿನಲ್ಲಿರುವ ಕಾಮನೆಗಳನ್ನು ಬಿಡದೆ, ದೇಹದ ಇಚ್ಛೆಗೆ ಕಾಮಾದಿ ಬಯಕೆಗಳಲ್ಲಿ ಬಿದ್ದಿರುವ ಮನುಜನು ಹೇಲು, ಉಚ್ಚೆ, ಕೀವಿನ ಕೊಳವಾಗಿರುವ ದೇಹವನ್ನು ಮೆಚ್ಚಿ, ಉಚ್ಚೆಯ ಬಚ್ಚಲಾಗಿರುವ ಯೋನಿಯ ಹುಚ್ಚು ಹಚ್ಚಿಕೊಂಡು ಕತ್ತೆಯಾಗಿ ತಿರುಗುವವರನ್ನು ಶರಣರು ಮೆಚ್ಚುವುದಿಲ್ಲ. ಹುಸಿ, ಮೋಹ, ಆಸೆಯನ್ನು ಅಳಿದು, ಪ್ರಕೃತಿ ಭಾವದಲ್ಲಿ ಸಹಜತೆಯಿಂದ ಇರುವವರನ್ನು ಶಿವಶರಣರು ಒಪ್ಪುತ್ತಾರೆ, ಮೆಚ್ಚುತ್ತಾರೆ ಎನ್ನುತ್ತದೆ ಈ ವಚನ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 9448633038

## ಸಿದ್ಧರಾಮನಹುಂಡಿ ಹಾಗೂ ಕುಪ್ಪೆಗಾಲ ಶಾಲೆಗೆ 10 ಲಕ್ಷ ರೂ. ಗಳ ದೇಣಿಗೆ ನೀಡಿದ ಸಿಎಂ



**ಹಂಪಿ ಟೈಮ್ಸ್ ಬೆಂಗಳೂರು**

ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯಬೇಕು. ವೈಚಾರಿಕತೆ, ವೈಜ್ಞಾನಿಕತೆ ಬೆಳೆಸಿಕೊಳ್ಳಬೇಕು. ಜ್ಞಾನದ ವಿಕಾಸವಾಗಬೇಕು ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್ ಮೈಸೂರು ವತಿಯಿಂದ 'ನಮ್ಮ ಶಾಲೆ ನಮ್ಮ ಜವಾಬ್ದಾರಿ' – ಸರ್ಕಾರಿ ಶಾಲೆಗಳ ಅಭಿವೃದ್ಧಿ ಹಾಗೂ ಬಲವರ್ಧನೆ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೃಹ ಕಚೇರಿ ಕೃಷ್ಣಾದಲ್ಲಿ ಇಂದು ಚಾಲನೆ ನೀಡಿ ಮಾತನಾಡಿದರು.

**ಸಂವಿಧಾನ ಪೀಠಿಕೆ ಹೇಳಿದ ಮಕ್ಕಳು**

ಗೃಹ ಕಚೇರಿ ಕೃಷ್ಣಾಕ್ಕೆ ಆಗಮಿಸಿದ್ದ ಮುಖ್ಯಮಂತ್ರಿಗಳು ಕಲಿತ ಸಿದ್ದರಾಮನಹುಂಡಿ ಹಾಗೂ ಕುಪ್ಪೆಗಾಲ ಸರ್ಕಾರಿ ಶಾಲೆಯ ಮಕ್ಕಳೊಡನೆ ಮುಖ್ಯ ಮಂತ್ರಿಗಳು ಸಂವಾದ ನಡೆಸಿದರು.

ಸಂವಿಧಾನವನ್ನು ಅರಿತುಕೊಳ್ಳಬೇಕು ಎಂದ ಮುಖ್ಯ ಮಂತ್ರಿಗಳು, ಸಂವಿಧಾನ ಏನು ಹೇಳುತ್ತದೆ ಹೇಳಿ ನೋಡೋಣ ಮಕ್ಕಳನ್ನು ಕೇಳಿದಾಗ , ಮಕ್ಕಳು ಸಂವಿಧಾನದ ಪೂರ್ಣ ಪೀಠಿಕೆಯನ್ನು ಹೇಳಿದರು. 'ಕೇವಲ ಕಂಠಪಾಠ ಮಾಡಿದರೆ ಸಾಲದು, ಅದರ ತಿರುಳನ್ನು ಅರಿತು ಅದರಂತೆ ನಡೆಯಬೇಕು ಎಂದರು.

ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಸಂವಿಧಾನದ ತಿರುಳು . ಸಮಾನತೆ ಸಮಸಮಾಜ ನಿರ್ಮಾಣ ವಾಗಬೇಕು. ಬುದ್ಧ, ಬಸವ, ಅಂಬೇಡ್ಕರ್ ಅವರು ಇದನ್ನೇ ಹೇಳಿಕೊಂಡು ಬಂದಿದ್ದಾರೂ ಇದು ಪೂರ್ಣವಾಗಿ ಹೋಗಿಲ್ಲ. ಇದೆಲ್ಲ ಓದಿ ಅರ್ಥ ಮಾಡಿಕೊಂಡು ಮಕ್ಕಳು ಮನುಷ್ಯತ್ವ ಬೆಳೆಸಿಕೊಳ್ಳಬೇಕು ಎಂದು ಮುಖ್ಯಮಂತ್ರಿಗಳು ಮಕ್ಕಳಿಗೆ ಕಿವಿಮಾತು ಹೇಳಿದರು.

# ಬರಡು ಭೂಮಿಯಲ್ಲಿ ಶ್ರೀಗಂಧ ಬೆಳೆದ ಸಾಧಕಿ

## ಯುವ ಪೀಳಿಗೆಗೆ ಸ್ಫೂರ್ತಿ ಕವಿತಾ ಮಿಶ್ರಾ



**ತಾ ಮಾಡಿದ ಹೆಣ್ಣು ತನ್ನ ತಲೆಯನೇರಿತ್ತು**
**ತಾ ಮಾಡಿದ ಹೆಣ್ಣು ತನ್ನ ತೊಡೆಯನೇರಿತ್ತು**
**ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಿಗೆಯನೇರಿತ್ತು**
**ತಾ ಮಾಡಿದ ಹೆಣ್ಣು ನಾರಾಯಣನ ಎದೆಯನೇರಿತ್ತು**
**ಅದು ಕಾರಣ ಹೆಣ್ಣು ಹೆಣ್ಣಲ್ಲ**
**ಹೆಣ್ಣು ರಾಕ್ಷಸಿಯಲ್ಲಹೆಣ್ಣು ಪ್ರತ್ಯಕ್ಷ**
**ಕಪಿಲ ಸಿದ್ಧ ಮಲ್ಲಿಕಾರ್ಜುನ ನೋಡಾ...!**

ತಾ ಮಾಡಿದ ಹೆಣ್ಣು ತನ್ನ ತಲೆಯೇರಿ ಶಿವನಾದ, ತಾ ಮಾಡಿದ ಹೆಣ್ಣು ನಾಲಗೆಯನ್ನೇರಿ ಬ್ರಹ್ಮನಾದ, ತಾ ಮಾಡಿದ ಹೆಣ್ಣು ಎದೆಯಲ್ಲಿ ನೆಲೆಸಿ ನಾರಾಯಣನಾದ. ಹೆಣ್ಣನ್ನು ರಾಕ್ಷಸಿ ಎಂದು ಕರೆಯುವುದು ತಪ್ಪು, ಹೆಣ್ಣನ್ನು ಹೆಣ್ಣು ಎಂದು ಹೆಸರಿಟ್ಟು ಹೀಗಳೆಯುವುದೂ ತಪ್ಪು, ಹೆಣ್ಣು ನಮ್ಮ ಕಣ್ಣಿಗೆ ಕಾಣುವ ಪ್ರತ್ಯಕ್ಷವಾದ ಕಪಿಲ ಸಿದ್ಧ ಮಲ್ಲಿಕಾರ್ಜುನನಲ್ಲದೆ ಬೇರಲ್ಲ ಅನ್ನುತ್ತಾ ಹೆಣ್ಣಿನ ಹಿರಿಮೆಯನ್ನು ಸಾರಿದ್ದಾನೆ. ಮಹಿಳೆಯರಲ್ಲಿ ಆತ್ಮಗೌರವ, ಚೈತನ್ಯ,ಸ್ವಾವಲಂಬಿಯಾಗಿಜೀವಿಸುವಉದ್ದೇಶದೊಂದಿಗೆ ಹೆಣ್ಣು ಅಬಲೆಯಲ್ಲ ಸಬಲೆ ಎನ್ನುವುದನ್ನು ಮತ್ತೆ ಮತ್ತೇ ನಿರೂಪಿಸುತ್ತಿದ್ದಾರೆ.

ಮೂಲತಃ ಬಯಲುಸೀಮೆಯ ರಾಯಚೂರು ಜಿಲ್ಲೆಯಲ್ಲಿ ಹುಟ್ಟಿ ಎಂಜಿನಿಯರಾಗಿದ್ದು, ಸೈಕಾಲಜಿಯಲ್ಲಿ ಎಂಎ ಸ್ನಾತಕೋತ್ತರ ಪದವಿಯನ್ನು ಪಡೆದು ಖ್ಯಾತ ಇನ್ಫೋಸಿಸ್ನಲ್ಲಿ ಕೆಲಸ ಪಡೆದಿದ್ದರು. ಆದರೆ ಇವರನ್ನು ಕೃಷಿ ಕ್ಷೇತ್ರ ಕೈ ಬೀಸಿ ಕರೆದರ ಫಲವಾಗಿ ಅತ್ಯುನ್ನತ ಸಂಬಳದ ಆ ಕೆಲಸವನ್ನು ತೊರೆದು ಬೇಸಾಯದತ್ತ ಮುಖ ಮಾಡಿದ್ದು ಮಾತ್ರ ಯಶೋಗಾಥೆ.

ಓದಿದ್ದು ಕಂಪ್ಯೂಟರ್ ಸೈನ್ಸ್. ಈ ಕೆಲಸವನ್ನು ಯಾಕೆ ಆಯ್ಕೆ ಮಾಡಿಕೊಂಡರು ಅನ್ನುವ ಪ್ರಶ್ನೆಗೆ ಅವರು ಹೇಳೋದು ಹೀಗೆ. ಗಂಡನ ಮನೆಯಲ್ಲಿ ಮಹಿಳೆಯರು ಹೊರಗೆ ಹೋಗಿ ಕೆಲಸ ಮಾಡಲು ಅವಕಾಶವಿರಲಿಲ್ಲ. ತವರು ಮನೆಯಲ್ಲಿ ಚೆನ್ನಾಗಿ ಓದಿಸಿದ್ದರು. ಹೀಗಾಗಿ ಹೊಲದಲ್ಲಿ ದುಡಿದು ಗೊತ್ತಿರಲಿಲ್ಲ. ಏಕೆಂದರೆ ಕೃಷಿ ಎಸಿ ರೂಂನಲ್ಲಿ ಕುಳಿತು ಲಕ್ಷಗಟ್ಟಲೇ ಹಣ ಎಣಿಸುವ ವೃತ್ತಿಯಲ್ಲ. ಮೈದಾ ಹಿಟ್ಟಿನಂತಿದ್ದ ಬಣ್ಣವನ್ನು ಮಣ್ಣಿಗೆ



ನೀಡಿ ಮಣ್ಣಿನ ಬಣ್ಣವನ್ನು ನಾನು ಪಡೆದಿದ್ದೇನೆ ಎಂದು ಹೇಳುವ ಮೂಲಕ ತಮ್ಮ ಕೆಲಸದಲ್ಲಿ ಆತ್ಮತೃಪ್ತಿ ಕಂಡುಕೊಂಡಿರುವುದನ್ನು ಜಗಜ್ಜಾಹಿರ ಗೊಳಿಸಿದ್ದಾರೆ.

ಇವರಿಗಿರುವ 8 ಎಕರೆ 10 ಗುಂಟೆಯಲ್ಲಿ ಮಿಶ್ರ ಬೇಸಾಯದ ಮೂಲಕ ಖ್ಯಾತಿ ಗಳಿಸಿದ್ದಾರೆ. 8 ಎಕರೆ ವ್ಯಾಪ್ತಿಯಲ್ಲಿ 2,500 ಶ್ರೀಗಂಧದ ಬೆಳೆ, 1 ಸಾವಿರ ಮಾವು, 600 ಸಿಬೇಕಾಯಿ, 600 ಸೀತಾಫಲ, 100 ಬೆಟ್ಟದ ನೆಲ್ಲಿಕಾಯಿ, 100 ಹುಣಸೆಹಣ್ಣು, 100 ಕರಿಬೇವು, 100 ತೆಂಗಿನ ಮರ 100 ನಿರಳೆಹಣ್ಣಿನ ಸಸಿಗಳನ್ನು ನೆಟ್ಟಿದ್ದು



ಸಾವಯವ ಸಂಯುಕ್ತಗಳನ್ನಾಗಿ ಪೋಷಿಸುತ್ತಿದ್ದಾರಂತೆ. ಇದರೊಂದಿಗೆ ಕುರಿಸಾಕಾಣಿಕೆ, ಕೋಳಿ ಸಾಕಾಣಿಕೆ, ಜೇನು ಸಾಕಾಣಿಕೆ ಹಾಗೂ ಮೀನುಗಾರಿಕೆಯಂತಹ ಕೃಷಿ ಪೋಷಿತ ಚಟುವಟಿಕೆಗಳ ಪೋಷಕರಾಗಿದ್ದಾರೆ. ರೈತರು ಸಮಗ್ರ ಬೇಸಾಯವನ್ನು ಅಳವಡಿಸಿಕೊಳ್ಳಬೇಕು. ವ್ಯವಸಾಯದೊಂದಿಗೆ ವಿವಿಧ ಬೆಳೆ, ಪಶು ಸಂಗೋಪನೆ ಸೇರಿದಂತೆ ಕೃಷಿಯಲ್ಲಿ ಕಾಂಬಿನೇಷನ್ ಇರಬೇಕು ಎನ್ನುವುದು ಇವರ ಅಭಿಲಾಷೆ.

ಡಾಕ್ಟರ್, ಎಂಜನಿಯರಾಗಬೇಕೆಂದು ಲಕ್ಷಗಟ್ಟಲೆ ಖರ್ಚು ಮಾಡಿ ವಿಫಲವಾದ ಉದಾಹರಣೆಗಳಿವೆ ಆದರೆ ವ್ಯವಸಾಯನ್ನು, ಭೂಮಿಯನ್ನು ನಂಬಿದ ಬದುಕಿಗೆ ವಿಫಲವಾದ ಉದಾಹರಣೆಗಳಿಲ್ಲ ಎನ್ನುತ್ತಾರೆ. ಯಶಸ್ವಿ ಬದುಕು ಕಟ್ಟಿಕೊಳ್ಳಲು ಕೃಷಿ ಕ್ಷೇತ್ರ ಇಂದು ವಿಶ್ವವ್ಯಾಪಿಯಾಗಿದೆ. ಕೃಷಿ ಜ್ಞಾನ ಪಡೆಯುವುದು ಕೂಡ ಪದವಿಯಾಗಿದೆ ಆಗಾಗಿ ನಾವೆಲ್ಲರೂ ಕೃಷಿ ಪೋಷಣೆಗೆ ಪ್ರೇರಣೆ ನೀಡಬೇಕಾದ ಸಂದಿಗ್ಧತೆ ಇದೆ. ಬಡತನದ ಬದುಕಿನ ನಿರ್ವಹಣೆಯಲ್ಲಿ ಬಿದ್ದ ಮನುಷ್ಯ



ಋತುಮಾನಗಳಿಗೆ ತಕ್ಕಂತೆ ಮಿಶ್ರ ಬೆಳೆ ಬೆಳೆದರೆ ಆರ್ಥಿಕವಾಗಿ ಲಾಭ ಪಡೆಯಲು ಸಾಧ್ಯವಿದೆ ಎನ್ನುವುದನ್ನು ರುಜುವಾತು ಮಾಡಿದ್ದಾರೆ.

ಒಬ್ಬ ಕೃಷಿಕ ಕೂಡ ಕೋಟಿಯಲ್ಲಿ ಮಾತಾಡುವ ಕಾಲ ಬಂದೇ ಬರುತ್ತದೆ. ರೈತ ಕೂಡ ಕೋಟ್ಯಾಂತರ ರೂಪಾಯಿಗಳಲ್ಲಿ ವ್ಯವಹಾರ ಮಾಡುವ ಕಾಲವನ್ನು ನಿರ್ಮಾಣ ಮಾಡುವುದು ಕೂಡ ಧ್ಯೇಯವಾಗಿದೆ ಎನ್ನುವುದನ್ನು ತಮ್ಮದೇ ಆದ ವಿಚಾರಗಳ ಮೂಲಕ ಜಾಗೃತ ಕೃಷಿಕರನ್ನು ಸೆಳೆಯುವ ಬರಡು ಭೂಮಿಯಲ್ಲಿ ಬಂಗಾರದಂತಹ ಶ್ರೀಗಂಧ ಬೆಳೆದ ಸಾಧಕಿ ಶ್ರೀಮತಿ ಕವಿತಾ ಮಿಶ್ರಾ ಯುವ ಪೀಳಿಗೆಗೆ ಸ್ಫೂರ್ತಿಯಾಗಿದ್ದಾರೆ.

ಪ್ರತಿ ರೈತರೂ ಕೋಟಿಗಳಲ್ಲಿ ದುಡಿಯಬಹುದು ಎನ್ನುವ ಅವರ ಮಾತು ಅತಿಯಶೋಕ್ತಿಯಂತೂ ಅಲ್ಲ. ಮಹಿಳೆಯರೇ ಹೆಚ್ಚು ಕಠಿಣ ಕೆಲಸಗಳನ್ನು ಮಾಡುತ್ತಾರೆ ಅನ್ನುವುದರ ಜೊತೆಗೆ "ಹೆಣ್ಮಕ್ಳೇ ಸ್ಟ್ರಾಂಗು ಗುರು!" ಎನ್ನುವುದನ್ನು ಕೂಡ ಪ್ರಚುರಪಡಿಸಿದ್ದಾರೆ. ಕವಿತಾ ಅವರು ಕೃಷಿಯಲ್ಲಿ ಸಾಧಿಸಿರುವ ಯಶಸ್ಸಿನ ಉದಾಹರಣೆಗಳು ಇವತ್ತಿನ ನಿರುದ್ಯೋಗ ಸಮಸ್ಯೆ ಬಗ್ಗೆ ಮಾತನಾಡುವವರಿಗೆ ಪರ್ಯಾಯ ಮಾರ್ಗವಾಗಲಿ ಇವರ ಯಶೋಗಾಥೆ ಪ್ರತಿಯೊಂದು ರೈತನಿಗೂ ಸ್ಫೂರ್ತಿಯಾಗಿರಲಿ. ಬೇಸಾಯವನ್ನೇ ಬಂಗಾರವಾಗಿ ಸುವುದು, ಕೃಷಿಕನಾಗಿ ದೇಶಕ್ಕೆ ಅನ್ನವಾಕುವುದು ಕೂಡ ಸಾರ್ಥಕತೆಯ ಕೆಲಸ ಎನ್ನುವಂತೆ ಇವರು ಮತ್ತು ಇವರ ಚಟುವಟಿಕೆಗಳು ಪ್ರಸ್ತುತ ಸಮಾಜಕ್ಕೆ ದಾರಿದೀಪವಾಗಲಿ ಎನ್ನುವುದು ಮಾತ್ರ ನಮ್ಮ ಆಶಯ. ಸಾವಯವ ಕೃಷಿ ಸಂಬಂಧಿತ ಮಾಹಿತಿಗಾಗಿ ಮಾನ್ವಿ ತಾಲೂಕು, ಕವಿತಾಳ ಗ್ರಾಮದ ಕವಿತಾ ಮಿಶ್ರಾ ಅವರನ್ನು 9448777045 ಸಂಪರ್ಕಿಸಬಹುದು.

Scan For Digital Colourful
HAMPI TIMES E-paper



**– ಕೆ.ಎಂ.ಶಿವಶಂಕರಯ್ಯ,** ಹಗರಿಬೊಮ್ಮನಹಳ್ಳಿ
ksshankru8@gmail.com

ಮುಂದುವರೆದ ಭಾಗ

# ಅಪ್ಪ ಎಂಬ ಆಲದ ಮರ

ಪ್ರತಿದಿನ ಆಫೀಸಿಗೆ ಹೋಗುವಾಗ ನನ್ನನ್ನು ಶಾಲೆಗೆ ಬಿಟ್ಟು ಹೋಗುವ ಅಪ್ಪ ಕೆಲ ಮಧ್ಯಾಹ್ನಗಳಲ್ಲಿ ಊಟದ ಬಿಡುವಿನ ಸಮಯಕ್ಕೆ ಸರಿಯಾಗಿ ಶಾಲೆಯ ಮುಂಭಾಗದ ರಸ್ತೆಗೆ ಬಂದು ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು. ಮತ್ತೆ ಊಟ ಮಾಡಿ ಮರಳಿ ಹೋಗುವಾಗ ಕಡ್ಡಾಯವಾಗಿ ಅಂದಿನ ದುಬಾರಿ ಮೆಲೋಡಿ ಚಾಕ್ಲೇಟ್ ಕೊಡಿಸುತ್ತಿದ್ದರು. ನಾನು ಶಾಲಾ ದಿನಗಳಲ್ಲಿ ಓರ್ವ ಕ್ರೀಡಾಪಟುವಾಗಿ ಬೆಳೆಯಲು ಕೂಡ ಅಪ್ಪ ನೀಡಿದ ಪ್ರೋತ್ಸಾಹವೇ ಕಾರಣ. ಓದಿಗೆ ಕೊಡುವಷ್ಟೇ ಮಹತ್ವವನ್ನು ಆಟೋಟಗಳಿಗೆ ವಿವಿಧ ಸ್ಪರ್ಧೆಗಳಿಗೆ ಕೊಡುತ್ತಿದ್ದ ಅಪ್ಪ ಎಲ್ಲದರಲ್ಲೂ ಭಾಗವಹಿಸಲು ಮಾವ ಆಗಿದ್ದ ಅಪ್ಪ ಊಟಕ್ಕೆ ಕುಳಿತರೆ ಅವರ ತಾಯಿ ಅಂದರೆ ನನ್ನಜ್ಜಿ... ನನ್ನಪ್ಪನಿಗೆ ಊಟಕ್ಕೆ ತಟ್ಟೆಯ ಬದಲು ಪರಾತ ಇಡ್ರಿ ಎಂದು ಹೇಳುತ್ತಿದ್ದರಂತೆ. ನನ್ನಪ್ಪನ ಒಡಹುಟ್ಟಿದವರ ಸುಮಾರು ಏಳೆಂಟು ಜನ ಮಕ್ಕಳು ನನ್ನಪ್ಪನ ತಟ್ಟೆಯಲ್ಲಿ ಕುಳಿತು ಊಟ ಮಾಡುತ್ತಿದ್ದರು ಅದಕ್ಕೆ ತಟ್ಟೆ ಸಾಲುವುದಿಲ್ಲ ಎಂದು ಪರಾತ ಇಡಲು ಹೇಳುತ್ತಿದ್ದರು.

ನಮ್ಮ ಮನೆಯ ಸುತ್ತಮುತ್ತ ಇರುತ್ತಿದ್ದ ಎಲ್ಲ ಮಕ್ಕಳ ಪಾಲಿಗೆ ನೆಚ್ಚಿನ ಅಂಕಲ್ ಮಾಮ ಅಜ್ಜ ಎಂದು ಕರೆಸಿಕೊಂಡಿದ್ದರು ನನ್ನ ಅಪ್ಪ. ಎಲ್ಲರ ಮಕ್ಕಳನ್ನು ಅಷ್ಟೇ ಪ್ರೀತಿ ವಿಶ್ವಾಸದಿಂದ ಕಾಣುತ್ತಿದ್ದ ಅಪ್ಪನ ಬಳಿ ಮಕ್ಕಳ ದಂಡೆ ಇರುತ್ತಿತ್ತು.



ಪ್ರೋತ್ಸಾಹಿಸುತ್ತಿದ್ದರು. ನನ್ನ ಬರಹದ ವೇಗವನ್ನು ಹೆಚ್ಚಿಸಲು ನನ್ನೊಂದಿಗೆ ತಾವು ಕೂಡ ಬರವಣಿಗೆಗೆ ಕಾಂಪಿಟೇಶನ್ ಮಾಡುತ್ತಿದ್ದರು ನನ್ನಪ್ಪ.... ಆದರೆ ನನ್ನ ಬರಹದ ವೇಗ ಹೆಚ್ಚಿಸಲು ಮಾತ್ರ ಅವರು ನಿರೀಕ್ಷಿಸಿದ ಮಟ್ಟಕ್ಕೆ ಸಾಧ್ಯವಾಗಲೇ ಇಲ್ಲ. ಆದರೆ ಬರಹಗಾರ್ತಿಯಾಗಲು ಸಾಧ್ಯವಾಯಿತು.

ನಾನು ಕಾಲೇಜಿಗೆ ಬಂದಾಗಲೂ ಕೂಡ ಅಪ್ಪ ನಾನು ಓದಲು ಕುಳಿತುಕೊಳ್ಳುತ್ತಿದ್ದ ಮಂಚದ ಪಕ್ಕದಲ್ಲಿಯೇ ಇದ್ದ ಮತ್ತೊಂದು ಮಂಚದ ಮೇಲೆ ಕುಳಿತು ಗಂಭೀರವಾಗಿ ಪುಸ್ತಕ ಓದುತ್ತಾ ನನಗೆ ಜೊತೆ ಕೊಡುತ್ತಿದ್ದರು.

ಸತ್ಯ, ನ್ಯಾಯ, ನಿಷ್ಠೆ, ಕರ್ತವ್ಯಪರತೆ ಪ್ರಾಮಾಣಿಕತೆ ಪ್ರೀತಿ ವಿಶ್ವಾಸ ಮುಂತಾದ ಮೌಲಿಕ ವಿಷಯಗಳನ್ನು ಕಥೆಗಳ ಮೂಲಕ ಹೇಳುತ್ತಾ ನಮ್ಮಲ್ಲಿ ಉತ್ತಮ ವಿಚಾರಗಳನ್ನು ತುಂಬುತ್ತಿದ್ದರು ಅಪ್ಪ. ನೋಡಲು ಗಂಭೀರ ಸ್ವಭಾವದವರು ಎಂದೆನಿಸಿದರು ನನ್ನಪ್ಪ ತಮಾಷೆ ಮಾಡುವುದರಲ್ಲಿ ಎತ್ತಿದ ಕೈ... ಬೆಂಗಳೂರು ಮೇಲ್ ಚಿತ್ರವನ್ನು ನೋಡಿ ಆ ಚಿತ್ರದಲ್ಲಿನ ನರಸಿಂಹರಾಜು ಅವರ ಪಾತ್ರದ ರೀತಿಯಲ್ಲಿ ನಾನು ಮತ್ತು ನನ್ನಪ್ಪ ಕೆಲವೊಮ್ಮೆ ತಮಾಷೆಯಾಗಿ ಮಾತನಾಡುತ್ತಿದ್ದು ಉಂಟು. ಯಾವುದಾದರೂ ಪೆಕ್ಯುಲಿಯರ್ ಎಂಬಂತಹ ಚಲನಚಿತ್ರದ ಪಾತ್ರಗಳನ್ನು ರಿವೀಲ್ ಮಾಡುವುದು ನಮಗೆ ಇಷ್ಟದ ಕೆಲಸ. ಡಾಕ್ಟರ್ ರಾಜಕುಮಾರ್ ಮತ್ತು ಸುಧಾರಾಣಿ ಅಭಿನಯದ 'ನಿನ್ನಂತ ಅಪ್ಪ ಇಲ್ಲ' ಎಂಬ ಹಾಡು ರೇಡಿಯೋದಲ್ಲಿ ಕೇಳಿ ಬಂದರಂತೂ ನನ್ನ ಪಕ್ಕಕ್ಕೆ ಬಂದು ಕೂಡುತ್ತಿದ್ದ ಅಪ್ಪ ಮತ್ತು ನಾನು ಕೈ ತಾಳ ಹಾಕುತ್ತಾ ಆ ಹಾಡನ್ನು ಆಸ್ವಾದಿಸುತ್ತಿದ್ದೆವು. ಹಳೆಯ ಹಿಂದಿ ಚಲನಚಿತ್ರಗಳು ಮತ್ತು ಗೀತೆಗಳನ್ನು ನೋಡುತ್ತಾ ತಮ್ಮ ಕಾಲೇಜ್ ದಿನಗಳ ಕುರಿತು ನನ್ನಪ್ಪ ಹೇಳಿಕೊಳ್ಳುತ್ತಿದ್ದರು ಅಪ್ಪನ ನೆನಪಿನ ಖಜಾನೆಯಲ್ಲಿ ಅನೇಕ ವಿಷಯಗಳು ಭದ್ರವಾಗಿ ನೆಲೆಯೂರಿದ್ದವು. ಅವರ ಬಾಲ್ಯದ ದಿನಗಳು ತುಂಬು ಕುಟುಂಬ ಅಣ್ಣ ತಮ್ಮಂದಿರ ನಡುವಿನ ಬಾಂಧವ್ಯ ಅಕ್ಕತಂಗಿಯರೊಂದಿಗೆ ಒಡನಾಡುತ್ತಿದ್ದ ರೀತಿ ಎಲ್ಲವೂ ನಮಗೆ ಆದರ್ಶಪ್ರಾಯವಾಗಿತ್ತು. ತಮ್ಮ ಕಚೇರಿ ಕೆಲಸದ ನಿಮಿತ್ತ ಬೇರೆ ಬೇರೆ ಊರುಗಳಿಗೆ ಹೋಗುತ್ತಿದ್ದ ಅಪ್ಪ ಅಲ್ಲಿ ಇರುವ ತನ್ನ ಸೋದರ ಸಂಬಂಧಿಗಳನ್ನು ಭೇಟಿಯಾಗದೆ ಬರುತ್ತಿರಲಿಲ್ಲ. ಅಂತೆಯೇ ಎಲ್ಲರ ನೆಚ್ಚಿನ ಸೋದರನಾಗಿದ್ದರು ಅಪ್ಪ. ಪ್ರಾಮಾಣಿಕತೆಯನ್ನು ತಮ್ಮ ಜೀವನದ ಉಸಿರಾಗಿಸಿಕೊಂಡಿದ್ದ ಅಪ್ಪ ಎಂದೂ ತಮ್ಮ ಕರ್ತವ್ಯಗಳಿಂದ ವಿಮುಖರಾಗಿರಲಿಲ್ಲ. ತನ್ನ ಒಡಹುಟ್ಟಿದವರ ಮಕ್ಕಳಿಗೆಲ್ಲ ಪ್ರೀತಿಯ ಚಿಕ್ಕಪ್ಪ ದೊಡ್ಡಪ್ಪ ಸೋದರ



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಸ್ನೇಹಕ್ಕೆ ಅತ್ಯಂತ ಮಹತ್ವ ಕೊಡುತ್ತಿದ್ದ ನನ್ನ ತಂದೆ ಹಲವಾರು ಆತ್ಮೀಯ ಸ್ನೇಹಿತರನ್ನು ಹೊಂದಿದ್ದರು. ಅದರಲ್ಲಿ ನನ್ನ ಮಾವನು ಕೂಡ ಒಬ್ಬರು (ನನ್ನ ಪತಿಯ ತಂದೆ). ಅಕ್ಕನಂತಿರುವ ಅತ್ಯಂತ ಆತ್ಮೀಯ ಸ್ನೇಹಿತೆಯೊಂದಿಗೆ ಕ್ಷುಲ್ಲಕ ಕಾರಣಕ್ಕಾಗಿ ನಾನು ಮಾತನಾಡದೆ ಹೋದಾಗ ಸುಮಾರು ಒಂದು ಗಂಟೆಗಳ ಕಾಲ ನನಗೆ ಸ್ನೇಹದ ಮಹತ್ವವನ್ನು ಬೋಧಿಸಿ ಪರವೂರಿನಲ್ಲಿದ್ದ ಆಕೆ ನನ್ನೂರಿನ ಸಮಾರಂಭಕ್ಕೆ ಬಂದ ಸಮಯದಲ್ಲಿ ಸ್ನೇಹದ ಮಹತ್ವ ಕುರಿತು ಹೇಳುತ್ತಾ ನಡೆದುಕೊಂಡೆ ಆಕೆ ಸಮಾರಂಭಕ್ಕೆ ಬಂದ ಮನೆಗೆ ತೆರಳಿ ನಮ್ಮಿಬ್ಬರನ್ನು ಒಂದುಗೂಡಿಸಿ ಇಂದಿನವರೆಗೂ ಆ ಸ್ನೇಹ ಹಚ್ಚ ಹಸಿರಾಗಿರಲು ಕಾರಣವಾದವರು ನನ್ನಪ್ಪ. ಆಕೆಯ ತಂದೆಯಾಗಲಿ ನನ್ನ ತಂದೆಯಾಗಲಿ ನಮ್ಮಿಬ್ಬರನ್ನು ಎಂದೂ ಬೇರೆ ಎಂದು ಭಾವಿಸದೆ ಬೆಳೆಸಿದರು. ಈಗಲೂ ಕೂಡ ನಾವಿಬ್ಬರು ಎರಡು ದೇಹ ಒಂದು ಆತ್ಮ ಎಂಬಂತೆ ಇದ್ದೇವೆ.ಇಂದಿಗೂ ಕೂಡ ನನ್ನನ್ನು ಪ್ರೀತಿಸುವ ಅರ್ಥಮಾಡಿಕೊಳ್ಳುವ ಹಲವಾರು ಸ್ನೇಹಿತರ ಬಳಗ ನನ್ನೊಂದಿಗೆ ಇರಲು ಕಾರಣ ನನ್ನಪ್ಪ ಸ್ನೇಹಿತರಿಗೆ ನೀಡುತ್ತಿದ್ದ ಮಹತ್ವ. ಮುಂದೆ ಹೈಸ್ಕೂಲು ಕಾಲೇಜುಗಳಿಗೆ ಬಂದಾಗ ನನ್ನ ಸ್ನೇಹಿತರೆಲ್ಲ ನನ್ನ ತಂದೆಯೊಂದಿಗೆ ಆತ್ಮೀಯವಾಗಿ ಹರಟೆ ಹೊಡೆದು ತಮ್ಮ ಸಂದೇಹಗಳನ್ನು ನಿವಾರಿಸಿಕೊಳ್ಳುತ್ತಿದ್ದರು. ಅದು ನನ್ನಪ್ಪ ಬದುಕಿರುವವರೆಗೂ ನಡೆದು ಬಂದಿತ್ತು. ದಿ ಅಮೇಜಿಂಗ್ ರಿಸಲ್ಟ್ಸ್ ಆಫ್ ಪಾಸಿಟಿವ್ ಥಿಂಕಿಂಗ್ ಎಂಬ ಪುಸ್ತಕದಿಂದ ಪ್ರಭಾವಿತರಾಗಿದ್ದ ಅಪ್ಪ ಕಡು ಧನಾತ್ಮಕವಾದಿಯಾಗಿದ್ದರು. ಪ್ರತಿ ಅಂಧಕಾರದ ಕಾರ್ಮೋಡದ ಹಿಂದೆಯೂ ಒಂದು ಬೆಳ್ಳಿಯ ಕಿರಣ ಇರುತ್ತದೆ ಎಂದು ಹೇಳುತ್ತಿದ್ದ ಅವರು ಪ್ರತಿಯೊಂದು ತೊಂದರೆಯನ್ನು ಸವಾಲಾಗಿ ಸ್ವೀಕರಿಸುವ ಛಾತಿಯನ್ನು ನಮ್ಮಲ್ಲಿ ಬೆಳೆಸಿದ್ದರು. ಒಂದೊಮ್ಮೆ ನನ್ನ ಪತಿ ಅನಾರೋಗ್ಯ ಪೀಡಿತರಾಗಿ ಆಸ್ಪತ್ರೆಯಲ್ಲಿದ್ದಾಗ ಬೆಂಗಳೂರಿನ ಒಂದು ತುದಿಯಿಂದ ಮತ್ತೊಂದು ತುದಿಯ ಆಸ್ಪತ್ರೆಗೆ ಪ್ರತಿದಿನ ಬಸ್ಸಿನಲ್ಲಿ ಪಯಣಿಸಿ ಬಂದು ನನಗೆ ಧೈರ್ಯ ತುಂಬುತ್ತಿದ್ದರು ನನ್ನ ಅಪ್ಪ. ಅಪಾರ ಆಶಾವಾದಿ ಅಪ್ಪ ಅಷ್ಟೇ ಹೆಂಗರುಳಿನವರು ಕೂಡ.

ಅಪ್ಪನ ಸ್ವಯಂಶಿಸ್ತು, ಪ್ರಾಮಾಣಿಕತೆಯ ಜೊತೆ ಜೊತೆಗೆ ಅವರು ಕಲಿಸಿದ ಮಿತವ್ಯಯದ ಪಾಠ ಇಂದಿಗೂ ನಮ್ಮನ್ನು ಕೈಹಿಡಿದು ನಡೆಸುತ್ತಿದೆ. ಯಾವಾಗಲೂ ಅವಶ್ಯಕ ಮತ್ತು ಅನವಶ್ಯಕ ಎಂದು ವಿಭಾಗಿಸಿ ಖರ್ಚುಗಳನ್ನು ಮಾಡಲು ಕಲಿಸಿದ್ದು ಅವರೇ. ಚಿಕ್ಕವರಿದ್ದಾಗ ನಾವು ಮೂರು ಜನ ಮಕ್ಕಳು ಒಂದೊಂದು ತಿಂಗಳು ಮನೆಯ ಖರ್ಚು ವೆಚ್ಚಗಳ ಲೆಕ್ಕವನ್ನು ಇಡುವ ಅಕೌಂಟೆಂಟ್ ಕೆಲಸ ಕೂಡ ಮಾಡಿದ್ದಿದೆ. ಇದರಿಂದ ಮನೆಯ ಆದಾಯ ಮತ್ತು ಖರ್ಚುಗಳ ಕುರಿತಾದ ಸಂಪೂರ್ಣ ಮಾಹಿತಿ ನಮಗಿರುತ್ತಿತ್ತು. ಅದೆಷ್ಟೇ ಆರ್ಥಿಕ ಅನುಕೂಲತೆ ನಮಗಿದ್ದರೂ ಚಿಕ್ಕಂದಿನಲ್ಲಿ ನಾವು ಕಲಿತ ಮಿತವ್ಯಯದ ಪಾಠ ಅನವಶ್ಯಕ ಖರ್ಚುಗಳಿಗೆ ದಾರಿ ಮಾಡಿಕೊಡಲಿಲ್ಲ. ಮಕ್ಕಳ ಮುಂದೆ ಮನೆಯ ತೊಂದರೆಗಳನ್ನು ಮಾತನಾಡಬಾರದು ಎಂಬ ಇಂದಿನ ಸೋ ಕಾಲ್ಡ್ ಸುಪೀರಿಯರ್ ಥಾಟ್ಸ್ ಅಪ್ಪ ನಲ್ಲಿ ಇರಲಿಲ್ಲ. ಮಕ್ಕಳಿಗೆ ಮನೆಯ ಎಲ್ಲಾ ಆಗುಹೋಗುಗಳ ಅರಿವು ಇರಬೇಕು ಎಂದೇ ಅವರು ಭಾವಿಸಿದ್ದರು ಮತ್ತು ಅಂತೆಯೇ ನಮ್ಮನ್ನು ಬೆಳೆಸಿದ್ದರು.

ಹೊಸ ಹೊಸ ವಿಷಯಗಳನ್ನು ಕಲಿಯುವಲ್ಲಿ ನನ್ನ ಅಪ್ಪನ ಉತ್ಸಾಹ ಮೇರೆ ಮೀರಿದ್ದು. ಯೋಗ,ಧ್ಯಾನ, ಪ್ರಾಣಾಯಾಮ ವಾಕಿಂಗ್ ಎಂದು ಸದಾ ಚಟುವಟಿಕೆಯಿಂದ ಇರುತ್ತಿದ್ದ ಅಪ್ಪ ತಮ್ಮ ಕೆಲಸ ಕಾರ್ಯಗಳನ್ನು ಕೂಡ ಅಷ್ಟೇ ಶ್ರದ್ಧೆಯಿಂದ ಮಾಡಿಕೊಳ್ಳುತ್ತಿದ್ದರು. ಅವರನ್ನು ಭೇಟಿ ಮಾಡಲು ಬರುತ್ತಿದ್ದ ಹಳ್ಳಿಯ ರೈತರನ್ನು ಕೂಡ ಅಷ್ಟೇ ಗೌರವದಿಂದ ಕಾಣುತ್ತಿದ್ದರು. ತನ್ನ ವಿರೋಧಿಗಳನ್ನು ಕೂಡ ಪ್ರೀತಿಸಬೇಕು ಎಂದು ಕಲಿಸಿಕೊಟ್ಟದ್ದು ನನ್ನ ಅಪ್ಪ.

ನನ್ನನ್ನು ವೈದ್ಯಳನ್ನಾಗಿಸಬೇಕೆಂಬ ಮಹತ್ತರ ಆಸೆಯನ್ನು ಹೊಂದಿದ್ದರೂ ಕೂಡ ಎಂದೂ ತಮ್ಮ ಆಶಯವನ್ನು ನನ್ನ ಮೇಲೆ ಹೇರಲಿಲ್ಲ. ಬದಲಾಗಿ ಕುವೆಂಪು ಅವರ ವಿಶ್ವಮಾನವ ತತ್ವದಂತೆ ಒಳ್ಳೆಯ ಮಾನವೀಯ ಮತ್ತು ನಾಗರಿಕ ಪ್ರಜ್ಞೆಯನ್ನು ನಮ್ಮಲ್ಲಿ ಬೆಳೆಸಿದರು. ಮುಂದೆ ನಮ್ಮ ಮದುವೆಯಾಗಿ ತಾವು ಮೊಮ್ಮಕ್ಕಳನ್ನು ಕಂಡ ಮೇಲು ಕೂಡ ಅಷ್ಟೇ ಪ್ರೀತಿ, ಅಕ್ಕರೆ ವಿಶ್ವಾಸದಿಂದ ಮೊಮ್ಮಕ್ಕಳನ್ನು ಬೆಳೆಸಿದರು ನನ್ನಪ್ಪ. ಯಾವತ್ತಾದರೂ ನಾನು ತಮಾಷೆಗೆ ನನ್ನ ಮಗಳನ್ನು ಅಪ್ಪನ ಮಗಳು ಅಂತ ಮೂದಲಿಸಿದಾಗ ನನ್ನ ಪಕ್ಕ ಬಂದು ಕುಳಿತು ಅಪ್ಪ ಹೇಳುತ್ತಿದ್ದುದು ಒಂದೇ ಮಾತು. "ನೀನ್ ಯಾರ್ ಮಗಳಮ್ಮ " ಅಂತ. ಖಂಡಿತ ನಿಜ ನಾನು ಕೂಡ ನನ್ನ ಅಪ್ಪನ **ಮಗಳೇ.**

ಅಪ್ಪ ಎಂಬ ಆಲದ ಮರದ ತಂಪು ನೆರಳಿನ ಅಡಿಯಲ್ಲಿ ಬೆಳೆದ ನಮಗೆ ನೂರಾರು ಸಾವಿರಾರು ನೆನಪುಗಳು ಒಂದರ ಹಿಂದೊಂದರಂತೆ ನುಗ್ಗಿ ಬರುತ್ತವೆ.....ಅಪ್ಪ ಎಂದರೆ ಹಲವಾರು ನೆನಪುಗಳ ಚಿರ ಪ್ರೀತಿಯ ಸವಿ ನೆನಪುಗಳು ಕಣ್ಣನ್ನು ಆರ್ದ್ರಗೊಳಿಸಿದರೂ ಮನ ಮತ್ತೆ ಮತ್ತೆ ಗುನುಗುತ್ತದೆ.....

ನಿನ್ನಂತ ಅಪ್ಪ ಇಲ್ಲ.. ಒಂದೊಂದು ಮಾತು ಬೆಲ್ಲ
ನೀನೆ ನನ್ನ ಜೀವ ನೀನೆ ನನ್ನ ಪ್ರಾಣ
ಯಾವ ದೇವ ತಂದ ವರವೋ ಇಂದು
ನಾನು ಅರಿಯೆನು

**ಕವಿ ಮನಸು**

## ಬಾಂಧವ್ಯ



ಪುಟ್ಟ ಅಲ್ಲಿ ಇಲ್ಲಿ ಎಲ್ಲೇ ಹೋಗಲಿ
ತುಂಟ ಬೆಕ್ಕು ಹಿಂಬಾಲಿಸುವುದು
ಮಳೆ ಹನಿಯ ಜೊತೆ ಜೊತೆಯಲಿ
ಅವರ ಆಟವು ಶುರುವಾಗುವುದು

ಸುರಿಯುವ ಮಳೆ ಹನಿಯ ಚಳಿಗೆ
ಬೆಕ್ಕು ಬೆಚ್ಚನೆ ಹಾಸಿಗೆ ಬಯಸಿಹುದು
ನಮ್ಮ ತುಂಟ ಪುಟ್ಟನ ತಲೆಯನ್ನೇ
ಬೆಚ್ಚನೆ ಹಾಸಿಗೆ ಮಾಡಿ ನಗುತಿಹುದು

ಮುಗ್ಧ ಮನಗಳ ಬಾಂಧವ್ಯವ ನೋಡಿ
ಪಕ್ಕದಲ್ಲಿದ್ದ ಎಲೆಯೇ ತಲೆ ಬಾಗಿಹುದು
ತನ್ನ ತಲೆಯನ್ನೇ ಕೊಡೆಯಂತೆ ಹಿಡಿದು
ಮುದ್ದು ಮನಗಳಿಗೆ ಆಸರೆಯಾಗಿಹುದು

ಭೂಮಿಗೆ ಮಳೆಹನಿಯ ಸಿಂಚನವಾದಂತೆ
ಮುಗ್ಧ ಮನಗಳಿಗೆ ಎಲೆ ಆಸರೆಯಾದಾಗ
ಅವರಿಬ್ಬರ ಮೊಗದಲ್ಲಿ ಖುಷಿಯ ಹೊನಲು
ಬೇಧವಿರದ ಬಾಂಧವ್ಯವಿದು ಪ್ರೀತಿಯ
ಕಡಲು!

– **ಪ್ರಜ್ಞಾ ರವೀಶ್** ಕುಳಮರ್ವ

## ಹಿತ



ಕುಟುಂಬದಲ್ಲಿ ಸಂಬಂಧಗಳ
ಮೌಲ್ಯವಾದರೆ ಸಂಹಿತಾ
ಅದುವೇ ಬಂಧು ಬಳಗಕ್ಕೆ ಹಿತ.
ಕುಟುಂಬವೇ ಪ್ರಧಾನವೆಂದು
ಸಮರ್ಪಿತವಾದರೆ ಚಿತ್ತ
ಸಾರ್ಥಕ ಜೀವನಕ್ಕೆ ಹಾದಿಯಾಗುವುದು
ಸುಲಲಿತ.

– **ಮಂಜುಶ್ರೀ ಮುರಳೀಧರ್**
ತೋರಣಗಲ್ಲು, ಬಳ್ಳಾರಿ




ಮೈಮೇಲೆ ಹರಿದ ಬಟ್ಟೆ ಇದ್ದರೂ
ಚಿಂತೆಯಿಲ್ಲ, ಕೈಯಲ್ಲೊಂದು
ಕನ್ನಡ ದಿನಪತ್ರಿಕೆ ಇರಲಿ
ಡಿ.ವಿ.ಜಿ.

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಮತದಾನ ಹೆಚ್ಚಳಕ್ಕೆ ಸಿದ್ಧರಾಗಿ

### ಸಿಇಓ ರಾಹುಲ್ ಶರಣಪ್ಪ ಸಂಕನೂರ ಹೇಳಿಕೆ | ಜಿಲ್ಲಾ ಸ್ವೀಪ್ ಸಮಿತಿಯ ಪೂರ್ವಭಾವಿ ಸಭೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ವಿವಿಧ ಮತದಾನ ಜಾಗೃತಿ ಕಾರ್ಯಕ್ರಮಗಳ ಮುಖಾಂತರ ಜಿಲ್ಲೆಯ ಶೇಕಡವಾರು ಮತದಾನ ಹೆಚ್ಚಿಸಬೇಕು ಎಂದು ಜಿಲ್ಲಾ ಸ್ವೀಪ್ ಸಮಿತಿಯ ನೋಡೆಲ್ ಅಧಿಕಾರಿಯೂ ಆದ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ತಿಳಿಸಿದರು.

ಜಿಲ್ಲಾ ಪಂಚಾಯತ್‌ನ ಸಭಾಂಗಣದಲ್ಲಿ ಮಂಗಳವಾರ ಏರ್ಪಡಿಸಿದ್ದ ಜಿಲ್ಲಾ ಸ್ವೀಪ್ ಸಮಿತಿಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಲೋಕಸಭಾ ಚುನಾವಣೆ ಸಂಬಂಧಿಸಿದಂತೆ ಮತದಾನದ ಮಹತ್ವದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳಾದ ರೀಲ್ಸ್, ಕವಿಗೋಷ್ಠಿ, ರೋಸ್ ಡೇ, ಬೈಕ್ ರ್‍ಯಾಲಿ, ಸಾಹಿತ್ಯ ಸಮ್ಮೇಳನ, ಸೆಲ್ಫಿ ಬೂತ್, ಸುಗಮ ಸಂಗೀತ ಸೇರಿದಂತೆ ಇನ್ನಿತರೆ ಕಾರ್ಯಕ್ರಮಗಳನ್ನು ಆಯೋಜನೆ ಮಾಡಲು ತೀರ್ಮಾನಿಸಲಾಗಿದೆ ಎಂದರು.

ಕಳೆದ ಚುನಾವಣೆಯಲ್ಲಿ ಸಂಡೂರು



ತಾಲ್ಲೂಕಿನ ಜಿಂದಾಲ್ ಕಾರ್ಖಾನೆಯಲ್ಲಿ ಕಡಿಮೆ ಮತದಾನ ಆಗಿದ್ದು, ಈ ಬಾರಿ ಕಾರ್ಮಿಕರಿಗೆ ಮತದಾನ ಅರಿವು ಮೂಡಿಸಿ ಹೆಚ್ಚಿನ ರೀತಿಯಲ್ಲಿ ಮತದಾನ ಚಲಾಯಿಸುವ ಕಾರ್ಯ ಮಾಡಬೇಕು ಎಂದರು.

ನಗರದಲ್ಲಿರುವ ಅಪಾರ್ಟ್‌ಮೆಂಟ್, ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಬ್ಯಾನರ್, ಫ್ಲೆಕ್ಸ್, ಎಲ್.ಇ.ಡಿ ವಿಡಿಯೋ ತುಣುಕು ಪ್ರದರ್ಶನ ಮಾಡಲಾಗುವುದು ಎಂದು ತಿಳಿಸಿದರು.

ಜಿಲ್ಲೆಯ ಆಯ್ದ ಗ್ರಾಮಗಳಲ್ಲಿ ಸಾಂಸ್ಕೃತಿಕ ಆಚರಣೆಯೊಂದಿಗೆ ಮತದಾನ ಕುರಿತು ಅರಿವು ಮೂಡಿಸಲಾಗುವುದು ಎಂದು ಹೇಳಿದರು.

ಸಭೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಎ.ಕೆ ಜಲಾಲಪ್ಪ, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ದಿವಾಕರ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಗ್ರೇಸಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಬರ ನಿರ್ವಹಣೆಗೆ ಹಣಕಾಸಿನ ತೊಂದರೆಯಿಲ್ಲ

### ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಹೇಳಿಕೆ

■ **ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲೆಯ 5 ವಿಧಾನಸಭಾ ಕ್ಷೇತ್ರಗಳಲ್ಲಿ ಬರದ ಭಾದೆ ಕಾಣುತ್ತಿದೆ. ಈ ಹಿನ್ನೆಲೆಯಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮುಂಜಾಗ್ರತೆಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಲಾಗಿದೆ ಎಂದು ಸಚಿವರಾದ ಶಿವರಾಜ ತಂಗಡಗಿ ಹೇಳಿದರು. ಮಾರ್ಚ 05ರಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಅವರು ಮಾತನಾಡಿದರು.

**ಕುಡಿವ ನೀರಿಗೆ ಸಂಬಂಧಿಸಿದಂತೆ:**
3.40 ಕೋಟಿ ರೂ. ಪೈಕಿ ಏಳು ತಾಲೂಕುಗಳಿಗೆ ತಲಾ 50 ಲಕ್ಷ ರೂ ಬಿಡುಗಡೆ ಮಾಡಲಾಗಿದೆ. ಜಿಲ್ಲಾಧಿಕಾರಿಗಳ ಕಚೇರಿಯ ಖಾತೆಯಲ್ಲಿ 16 ಕೋಟಿ ರೂ ಲಭ್ಯವಿದೆ. ಬರ, ಕುಡಿವ ನೀರು ಸೇರಿದಂತೆ ಬರ ನಿರ್ಹಣೆಗೆ ಹಣಕಾಸಿನ ತೊಂದರೆ ಇಲ್ಲ ಎಂದು ಸಚಿವರು ತಿಳಿಸಿದರು.

ಅಧಿಕಾರಿಗಳು ಬರೀ ಕಚೇರಿಯಲ್ಲಿ ಕೂಡಬಾರದು. ಕಾಲಕಾಲಕ್ಕೆ ಕ್ಷೇತ್ರ ಭೇಟಿ ನಡೆಸಬೇಕು. ಗ್ರಾಮೀಣ ಮತ್ತು ನಗರ



ಪ್ರದೇಶಗಳಲ್ಲಿ ಸಂಚರಿಸಿ ಅಲ್ಲಿನ ವಾಸ್ತವ ಪರಿಸ್ಥಿತಿಯನ್ನು ಅರಿತು ಜನತೆಗೆ ಸ್ಪಂದನೆ ನೀಡಬೇಕು ಎಂದು ಎಲ್ಲ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು. ತಾವು ಸೇರಿದಂತೆ ಇನ್ನುಳಿದ ಶಾಸಕರಿಂದ ಸಹ ಕ್ಷೇತ್ರ ಭೇಟಿ ನಡೆಯಲಿದೆ ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಶಾಸಕರಾದ ಜನಾರ್ಧನ ರೆಡ್ಡಿ, ಜಿಪಂ ಸಿಇಓ ರಾಹುಲ್ ಪಾಂಡೆಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ, ಅಪರ ಜಿಲ್ಲಾಧಿಕಾರಿ ಸಾವಿತ್ರಿ ಕಡಿ, ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ ಇತರರು ಇದ್ದರು.

# ಜನರಿಗಾಗಿ ಉತ್ತಮ ಸಾರಿಗೆ ವ್ಯವಸ್ಥೆ

### ಸಚಿವ ರಾಮಲಿಂಗಾರೆಡ್ಡಿ ಹೇಳಿಕೆ | ನೂತನ ಬಸ್‌ಗಳ ಲೋಕಾರ್ಪಣೆ, ಗ್ರಾಮೀಣ ಬಸ್ ಘಟಕ ಉದ್ಘಾಟನೆ

■ **ಹಂಪಿ ಟೈಮ್ಸ್ ರಾಯಚೂರು**

ಸರ್ಕಾರದಿಂದ ರಾಜ್ಯದ ಜನರಿಗೆ ಉತ್ತಮ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸುವ ಹಿತದೃಷ್ಠಿಯಿಂದ ಸರ್ಕಾರಿ ಸಾರಿಗೆ ವಲಯದಲ್ಲಿ ಹಲವು ಸೌಲಭ್ಯಗಳನ್ನು ನೀಡಲಾಗಿದ್ದು, ರಾಯಚೂರು ಜಿಲ್ಲೆಗೆ ನೂತನ ಬಸ್‌ಗಳನ್ನು ಒದಗಿಸಲಾಗಿದೆ. ಸಾರ್ವಜನಿಕರಿಗೆ ಸುಸ್ಸಜಿತ, ಸುರಕ್ಷಿತ ಪ್ರಯಾಣದ ಸೇವೆಯನ್ನು ನೀಡಲಾಗುವುದು ಎಂದು ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಮಂಗಳವಾರದಂದು ನಗರದ ಗ್ರಾಮೀಣ ಬಸ್ ಘಟಕ–01ರಲ್ಲಿ ಕಲ್ಯಾಣ ಕನಾಟಕ ರಸ್ತೆ ಸಾರಿಗೆ ನಿಗಮದ ವತಿಯಿಂದ ಹಮ್ಮಿಕೊಂಡಿದ್ದ ಸರ್ಕಾರದ 100 ಕೋಟಿ ರೂ.ಗಳ ಅನುದಾನದಲ್ಲಿ ಖರೀದಿಸಿದ 250 ನೂತನ ಬಸ್‌ಗಳ ಲೋಕಾಪ್ಣೆ, ರಾಯಚೂರು ಗ್ರಾಮೀಣ ಬಸ್ ಘಟಕ ಉದ್ಘಾಟನೆ ಹಾಗೂ ಅಪಘಾತ ರಹಿತ ಚಾಲಕರಿಗೆ ಬೆಳ್ಳಿ ಪದಕ ವಿತರಣಾ ಸಮಾರಂಭವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ಸರ್ಕಾರದಿಂದ ವಿವಿಧ ಯೋಜನೆಗಳನ್ನು ಜಾರಿಗೆ ತರಲಾಗಿದ್ದು, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ 9 ವಿಭಾಗಗಳು ಈಗಾಗಲೇ ಕಾರ್ಯನಿರ್ವಹಿಸುತ್ತಿದ್ದು, 52 ಘಟಕಗಳನ್ನು ಹೊಂದಿದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಒಟ್ಟು 164 ಬಸ್ ನಿಲ್ದಾಣಗಳಿದ್ದು, ಪ್ರತಿ ನಿತ್ಯ 17.78 ಲಕ್ಷ ಪ್ರಯಾಣಿಕರು ಕಲ್ಯಾಣ ಕರ್ನಾಟಕ ಸಾರಿಗೆಯಲ್ಲಿ ಪ್ರಯಾಣವನ್ನು ಮಾಡುತ್ತಿದ್ದಾರೆ ಎಂದರು. ಸರ್ಕಾರದಿಂದ ಜಾರಿಗೆ ತರಲಾದ ಶಕ್ತಿ ಯೋಜನೆಯಿಂದ ಪ್ರಸ್ತುತ ದಿನಮಾನಗಳಲ್ಲಿ ಮಹಿಳೆಯರಿಗೆ ಸಾಕಷ್ಟು ಅನುಕೂಲವಾಗಿದ್ದು, ಶಕ್ತಿ ಯೋಜನೆಯು ಜಾರಿಯಾದ ನಂತರ ರಾಜ್ಯದ ಜನರ ಆರ್ಥಿಕತೆ ಸ್ಥಿರವಾಗಿದೆ. ಕರ್ನಾಟಕ ರಾಜ್ಯದ 4 ನಿಗಮಗಳಲ್ಲಿ ಶಕ್ತಿ ಯೋಜನೆಯಡಿ 162.88 ಕೋಟಿ ಮಹಿಳೆಯರು ಪ್ರಯಾಣ ಬೆಳೆಸಿದ್ದು, ಒಟ್ಟು 3894.28 ಕೋಟಿ ಮೌಲ್ಯದ ಟಿಕೇಟ್ ಮೊತ್ತವಾಗಿದೆ ಎಂದು ತಿಳಿಸಿದರು.

ಶಕ್ತಿ ಯೋಜನೆಯು ಜಾರಿಯಾದ ನಂತರ ರಾಯಚೂರು ಜಿಲ್ಲೆಯಲ್ಲಿ 56 ಹೊಸ ಅನುಸೂಚಿಗಳನ್ನು ಪ್ರಾರಂಭಿಸಲಾಗಿದ್ದು, ಶಕ್ತಿ ಯೋಜನೆಯ ಮೊದಲು 1.40 ಲಕ್ಷ ಪ್ರಯಾಣಿಕರ ಸಂಖ್ಯೆಯಿದ್ದು, ಪ್ರಸ್ತು ಜಿಲ್ಲೆಯಲ್ಲಿ 2.14 ಕೋಟಿ ಜನರು ಶಕ್ತಿ ಯೋಜನೆಯ ನಂತರ ಬಸ್‌ಗಳಲ್ಲಿ ಪ್ರಯಾಣ ಬೆಳೆಸುತ್ತಿದ್ದಾರೆ ಎಂದು ಹೇಳಿದರು.

ಇದೇ ವೇಳೆ ಗ್ರಾಮೀಣ ಶಾಸಕ ಬಸನಗೌಡ ದದ್ದಲ್ ಅವರು ಮಾತನಾಡಿ, ರಾಜ್ಯ ಸರ್ಕಾರದ ಶಕ್ತಿ ಯೋಜನೆಯನ್ನು ಜಾರಿಗೊಳಿಸಿ ಮಹಿಳೆಯರಿಗೆ ಉಚಿತವಾದ ಪ್ರಯಾಣದ ಸೌಲಭ್ಯವನ್ನು ನೀಡಲಾಗಿದ್ದು, ಸರ್ಕಾರದ ಈ ಯೋಜನೆಯಿಂದ ಮಹಿಳೆಯರಲ್ಲಿ ಶಕ್ತಿ ತುಂಬಿದಂತಾಗಿದೆ ಎಂದು ತಿಳಿಸಿದರು.

ಪ್ರಯಾಣಿಕರ ರಕ್ಷಣೆಯಲ್ಲಿ ಸಾರಿಗೆ ನಿಗಮದ ಚಾಲಕರು, ನಿರ್ವಾಹಕರು ಹಾಗೂ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಉತ್ತಮ ಹಾಗೂ ಜವಾಬ್ದಾರಿಯುತವಾದ ಕಾರ್ಯವನ್ನು ನಿರ್ವಹಿಸುತ್ತಿದ್ದು, ಅವರ ಕುಂದು ಕೊರತೆಗಳನ್ನು ಸರ್ಕಾರದಿಂದ ಆಲಿಸಿ ಪರಿಹಾರ ನೀಡಲಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಅಪಘಾತ ರಹಿತ ಚಾಲನೆಯನ್ನು ಮಾಡಿದ ಚಾಲಕರಿಗೆ ಬೆಳ್ಳಿ ಪದಕವನ್ನು ವಿತರಿಸಿ ಸನ್ಮಾನಿಸಲಾಯಿತು. ನಂತರ ಮೃತಾವಲಂಬಿತರಿಗೆ 10 ಲಕ್ಷ ಪರಿಹಾರವನ್ನು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷ ಮಲ್ಲಿಕಾರ್ಜುನ ಗೌಡ, ಉಪಾಧ್ಯಕ್ಷ ಬಸೀರ್ ಆಹ್ಮದ್, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಕಲಬುರಗಿ ವ್ಯವಸ್ಥಾಪಕ ನಿರ್ದೇಶಕ ಎಂ.ರಾಚಪ್ಪ, ಮುಖ್ಯ ಸಂಚಾರ ವ್ಯವಸ್ಥಾಪಕ ವಿ.ಎಚ್ ಸಂತೋಷ, ಮುಖ್ಯ ತಾಂತ್ರಿಕ ಶಿಲ್ಪಿ ಸಂತೋಷ ಗೋಗೇರಿ, ಮುಖ್ಯ ಕಾಮಗಾರಿ ಅಭಿಯಂತರ ಬೋರೆಡ್ಡಿ, ಮುಖ್ಯ ಕಾನೂನು ಅಧಿಕಾರಿ ಎಸ್.ಎಸ್ ಭಾವಿಕಟ್ಟಿ, ಉಪಮುಖ್ಯ ಕಾಮಗಾರಿ ತಾಂತ್ರಿಕ ಶಿಲ್ಪಿ ವಿ.ಎಚ್ ಪುರಾಣಿಕ, ವಿಭಾಗೀಯ ನಿಯಂತ್ರಣಾಧಿಕಾರಿ ಚಂದ್ರಶೇಖರ ಎಂ.ಎಸ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



# ಕುಡಿಯುವ ನೀರಿನ ಸಮಸ್ಯೆಗೆ ದೂರು ಸಲ್ಲಿಸಿ

■ **ಹಂಪಿ ಟೈಮ್ಸ್ ಕೊಪ್ಪಳ**

ಭಾಗ್ಯನಗರ ಪಟ್ಟಣದಲ್ಲಿ ಕುಡಿಯುವ ನೀರಿನ ಸಮಸ್ಯೆಗಳ ಪರಿಹಾರಕ್ಕೆ ಪಟ್ಟಣ ಪಂಚಾಯತ್ ಕಾರ್ಯಾಲಯದಲ್ಲಿ ಸಹಾಯವಾಣಿ ಕೇಂದ್ರವನ್ನು ಪ್ರಾರಂಭಿಸಲಾಗಿದ್ದು, ಕುಡಿಯುವ ನೀರಿನ ಸಮಸ್ಯೆಯಾದರೆ ದೂರು ಸಲ್ಲಿಸಬಹುದಾಗಿದೆ.

ಭಾಗ್ಯನಗರ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಸಮಸ್ಯೆ ಆಗದಂತೆ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ. ಆದರೂ ಕೆಲವೊಮ್ಮೆ ಆಗುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಪಟ್ಟಣ ಪಂಚಾಯತಿಯಲ್ಲಿ ಸಹಾಯವಾಣಿ ಕೇಂದ್ರವನ್ನು ಪ್ರಾರಂಭಿಸಲಾಗಿದೆ. ಪಟ್ಟಣದ 19 ವಾರ್ಡುಗಳಲ್ಲಿ ಪಟ್ಟಣ ಪಂಚಾಯತಿಯು ಕುಡಿಯುವ ನೀರು ನಿಗದಿತ ಅವಧಿಯಲ್ಲಿ ಪೂರೈಕೆ ಮಾಡಲಾಗುತ್ತಿದೆ. ಮಳೆಯ ಕೊರತೆಯಿಂದ ನದಿ ಪಾತ್ರದಲ್ಲಿನ ನೀರಿನ ಸಂಗ್ರಹ ಕಡಿಮೆಯಾಗಿರುವದರಿಂದ ಮತ್ತು ಬೋರ್‌ವೆಲ್‌ಗಳ ಅಂತರ್ಜಲ ಕಡಿಮೆ ಆಗಿರುವುದರಿಂದ ನೀರು ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿದೆ. ಸಾರ್ವಜನಿಕರಿಗೆ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಪಟ್ಟಣ ಪಂಚಾಯತಿಯ ಕಾರ್ಯಾಲಯದಲ್ಲಿ ನೂತನವಾಗಿ ಸಹಾಯವಾಣಿ ಕೇಂದ್ರವನ್ನು ಪ್ರಾರಂಭಿಸಲಾಗಿರುತ್ತದೆ.

ಪ.ಪಂ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದಲ್ಲಿ ಸಾರ್ವಜನಿಕರು ಸಹಾಯವಾಣಿ ಸಂಖ್ಯೆ 08539–230243 ಗೆ ಕರೆ ಮಾಡಿ ದೂರನ್ನು ದಾಖಲಿಸಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು ಎಂದು ಭಾಗ್ಯನಗರ ಪಟ್ಟಣ ಪಂಚಾಯತ ಮುಖ್ಯಾಧಿಕಾರಿ ತಿಳಿಸಿದ್ದಾರೆ.

# ಚರ್ಮ ಕುಶಲಕರ್ಮಿಗಳಿಗೆ ಕೌಶಲ್ಯ ಉನ್ನತೀಕರಣ ತರಬೇತಿ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಕೊಪ್ಪಳ**

ಡಾ ಬಾಬು ಜಗಜೀವನ್ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದಿಂದ 2023–24ನೇ ಸಾಲಿನ ನಿಗಮದ ಕೌಶಲ್ಯ ಉನ್ನತೀಕರಣ ತರಬೇತಿಗಾಗಿ ಅರ್ಹ ಚರ್ಮಕುಶಲ ಕರ್ಮಿಗಳಿಂದ ಆಫ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಪಿಯುಸಿ ಮತ್ತು ಡಿಪ್ಲೋಮಾ ಆದ ಚರ್ಮಕುಶಲ ಕರ್ಮಿಗಳಿಗೆ ಉತ್ತರ ಪ್ರದೇಶದ ಆಗ್ರಾದಲ್ಲಿ 60 ದಿನಗಳ ಕೌಶಲ್ಯ ಉನ್ನತೀಕರಣ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ. ಅರ್ಜಿ ಸಲ್ಲಿಸಲು ಮಾರ್ಚ್ 12 ಕೊನೆಯ ದಿನವಾಗಿದ್ದು, ಅರ್ಹ ಚರ್ಮಕುಶಲ ಕರ್ಮಿಗಳಿಗೆ ತಮ್ಮ ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಪಡಿತರ ಚೀಟಿ, ಗುರುತಿನ ಚೀಟಿ, ಬ್ಯಾಂಕ್ ಖಾತೆಯ ಪ್ರತಿ ಹಾಗೂ ಎರಡು ಫೋಟೋಗಳೊಂದಿಗೆ ಲಿಡ್ ಕರ್ ಲೆದರ್ ಎಂಪೋರೊಯಂ, ಬುಡಾ ಕಾಂಪ್ಲೇಕ್ಸ್, ಶಾಪ್ ನಂ.24, ಗ್ರೌಂಡ್ ಪ್ಲೋರ್, ಮೋತಿ ಸರ್ಕಲ್, ಬಳ್ಳಾರಿ ಕಚೇರಿಗೆ ಮಾ.12ರೊಳಗಾಗಿ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08392–271741, 9480886274, 7676591259 ಗೆ ಸಂಪರ್ಕಿಸಬಹುದಾಗಿದೆ ಎಂದು ಲಿಡ್‌ಕರ್ ಕೊಪ್ಪಳ ಜಿಲ್ಲಾ ಸಂಯೋಜಕರು ತಿಳಿಸಿದ್ದಾರೆ.

# ತೋಟಗಾರಿಕೆ ಇಲಾಖೆಯಿಂದ ತರಬೇತಿಗೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ರಾಯಚೂರು**

ತೋಟಗಾರಿಕ ಇಲಾಖೆಯಿಂದ 2024–25ನೇ ಸಾಲಿಗೆ ತೋಟಗಾರಿಕ ತರಬೇತಿಗಾಗಿ ರಾಯಚೂರು ಜಿಲ್ಲೆಯ ಆಸಕ್ತಿಯುಳ್ಳ ಅರ್ಹ ರೈತ ಮಕ್ಕಳಿಗೆ ಕೊಪ್ಪಳ ತಾಲೂಕಿನ ಮುನಿರಾಬಾದ ತೋಟಗಾರಿಕ ತರಬೇತಿ ಕೇಂದ್ರದಲ್ಲಿ 10 ತಿಂಗಳ ತರಬೇತಿ ನಡೆಯಲಿದ್ದು ಆಸಕ್ತರು ತೋಟಗಾರಿಕೆ ಉಪನಿರ್ದೇಶಕರ ಕಛೇರಿ ಅಥಾವ ಇಲಾಖೇಯ ವೆಬ್‌ಸೈಟ್ https://horticulturedir.karnataka.gov.in ಮೂಲಕ ಪಡೆಯ ಬಹುದು. ಸಾಮಾನ್ಯ ಅಭ್ಯರ್ತಿ–16 ( ಮಹಿಳೆ–8), ಪರಿಶಿಷ್ಟ ಜಾತಿ–3 ಪರಿಶಿಷ್ಟ ಪಂಗಡ–1 ಗಳಂತೆ ಒಟ್ಟು 20 ಅಭ್ಯರ್ತಿಗಳನ್ನು ನಿಗದಿಪಡಿಸಲಾಗಿದ್ದು. ಪರಿಶಿಷ್ಟ ಜಾತಿ , ಪರಿಶಿಷ್ಟ ಪಂಗಡದವರಿಗೆ ಕನಿಷ್ಠ 18 ವರ್ಷ ಗರಿಷ್ಟ 33 ವರ್ಷ , ಇತರರಿಗೆ ಕನಿಷ್ಠ 18 ವರ್ಷ ಗರಿಷ್ಠ 30ವರ್ಷ ವಯೋಮಿತಿಯನ್ನು ನಿಗದಿ ಪಡಿಸಲಾಗಿದ್ದು. ಅಭ್ಯರ್ಥಿಗಳು ಕನ್ನಡ ವಿಷಯದೊಂದಿಗೆ ಎಸ್.ಎಸ್.ಎಲ್.ಸಿ ಪರಿಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಅರ್ಜಿ ಸಲ್ಲಿಸಬಯಸುವ ಅಭ್ಯರ್ಥಿಗಳ ಪೋಷಕರು ಕಡ್ಡಾಯವಾಗಿ ಜಮೀನು ಹೊಂದಿರಬೇಕು ಹಾಗೂ ಸ್ವಂತ ಸಾಗುವಳಿ ಮಾಡುತ್ತಿರಬೇಕಾಗಿರುತ್ತದೆ. ಅರ್ಜಿ ಸಲ್ಲಿಸಿ ಅಗತ್ಯ ದಾಖಲೆಗಳೊಂದಿಗೆ ಕಛೇರಿಗೆ ಸಲ್ಲಿಸಲು ಏ.1 ಕೊನೆಯ ದಿನಾಂಕವಾಗಿರುತ್ತದೆ ಎಂದು ತೋಟಗಾರಿಕೆ ಉಪ ನಿರ್ದೇಶಕ ಮಹಮದ್ ಅಲಿ ತಿಳಿಸಿದ್ದಾರೆ.

# ರಾಜ್ಯಶಾಸ್ತ್ರ ವಿಷಯ ಪರೀಕ್ಷೆಗೆ 10544 ಸಂಖ್ಯಾಶಾಸ್ತ್ರ ವಿಷಯ ಪರೀಕ್ಷೆಗೆ 907 ವಿದ್ಯಾರ್ಥಿಗಳು ಹಾಜರು

■ **ಹಂಪಿ ಟೈಮ್ಸ್ ರಾಯಚೂರು**

ಜಿಲ್ಲೆಯಾದ್ಯಂತ ನಡೆಯುತ್ತಿರುವ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ರಾಜ್ಯಶಾಸ್ತ್ರ ವಿಷಯದ ಪರೀಕ್ಷೆಗಳು ಮಂಗಳವಾರ ನಡೆದಿದ್ದು, ಈ ಪರೀಕ್ಷೆಗೆ ಒಟ್ಟು 11420 ವಿದ್ಯಾರ್ಥಿಗಳು ನೊಂದಾಯಿಸಿಕೊಂಡಿದ್ದು, ಇದರಲ್ಲಿ ಒಟ್ಟು 10544 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದಾರೆ. ಉಳಿದಂತೆ 876 ವಿದ್ಯಾರ್ಥಿಗಳು ಗೈರಾಗಿದ್ದಾರೆ.

ಜಿಲ್ಲೆಯ ರಾಯಚೂರು ತಾಲೂಕಿನಲ್ಲಿ 2784 ವಿದ್ಯಾರ್ಥಿಗಳು ಹಾಜರಾಗಿದ್ದರೆ, 260 ವಿದ್ಯಾರ್ಥಿಗಳು ಗೈರಾಗಿದ್ದಾರೆ. ಲಿಂಗಸುಗೂರು 2136 ಹಾಜರು 93 ಗೈರು, ಮಾನ್ವಿ 1342 ಹಾಜರು 128 ಗೈರು, ಸಿಂಧನೂರು ತಾಲೂಕಿನಲ್ಲಿ 1806 ಹಾಜರು 149 ವಿದ್ಯಾರ್ಥಿಗಳು ಗೈರು.

ದೇವದುರ್ಗ ತಾಲೂಕಿನಲ್ಲಿ 1349 ವಿದ್ಯಾರ್ಥಿಗಳು ಹಾಜರು ಹಾಗೂ 161 ವಿದ್ಯಾರ್ಥಿಗಳು ಗೈರು, ಮಸ್ಕಿ 582 ಹಾಜರು 49 ವಿದ್ಯಾರ್ಥಿಗಳು ಗೈರಾಗಿದ್ದಾರೆ. ಹಾಗೂ ಸಿರವಾರ ತಾಲೂಕಿನಲ್ಲಿ 545 ವಿದ್ಯಾರ್ಥಿಗಳು ಹಾಜರಾಗಿದ್ದರೆ 36 ವಿದ್ಯಾರ್ಥಿಗಳು ಗೈರಾಗಿದ್ದಾರೆ.

ಉಳಿದಂತೆ ಸಂಖ್ಯಾಶಾಸ್ತ್ರ ವಿಷಯ ಪರೀಕ್ಷೆಗೆ ಒಟ್ಟು 937 ವಿದ್ಯಾರ್ಥಿಗಳು ನೊಂದಾಯಿಸಿಕೊಂಡಿದ್ದು, ಇದರಲ್ಲಿ ಒಟ್ಟು 907 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದಾರೆ. ಉಳಿದ 30 ವಿದ್ಯಾರ್ಥಿಗಳು ಗೈರಾಗಿದ್ದಾರೆ.

ಜಿಲ್ಲೆಯ ರಾಯಚೂರು ತಾಲೂಕಿನಲ್ಲಿ 683 ವಿದ್ಯಾರ್ಥಿಗಳು ಹಾಜರಾಗಿದ್ದರೆ, 22 ವಿದ್ಯಾರ್ಥಿಗಳು ಗೈರಾಗಿದ್ದಾರೆ. ಮಾನ್ವಿ 218 ಹಾಜರು 08 ಗೈರು, ಸಿಂಧನೂರು ತಾಲೂಕಿನಲ್ಲಿ 6 ಹಾಜರಾಗಿದ್ದಾರೆ ಯಾವುದೇ ವಿದ್ಯಾರ್ಥಿ ಗೈರಾಗಿಲ್ಲ.

Hall is a Perfect suit for a meeting, Your Son & Daughters marriage, your child's birthday party, wedding reception or a business seminar. This a best party place located in hosapet, Vijayanagara Dist.
WE ARE OPEN for Every Function
V N Royal Garden Function Hall



Behind Meeralam Talkies, Hosapete-583201 Vijayanagara Dist. Contact For Booking: 9980136034, 9880701217

ಮೈಕ್ರೋ ನ್ಯೂಸ್

## ಮಾ.16ರಂದು ರಾಷ್ಟ್ರೀಯ ಲೋಕ ಅದಾಲತ್

**ಹಂಪಿ ಟೈಮ್ಸ್ ಬಳ್ಳಾರಿ**
ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ನಿರ್ದೇಶನದಂತೆ ಈ ಹಿಂದೆ ನಿಗದಿಪಡಿಸಿದ್ದ ಮಾ.09 ರಂದು ಬದಲಾಗಿ ಮಾ.16 ರಂದು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ ರಾಷ್ಟ್ರೀಯ ಲೋಕ ಅದಾಲತ್ ಏರ್ಪಡಿಸಲಾಗಿದೆ.
ಅದಾಲತ್‌ನಲ್ಲಿ ಬಾಕಿ ಇರುವ ಪ್ರಕರಣಗಳಲ್ಲಿ ಉಭಯ ಪಕ್ಷಗಾರರು ಹಾಗೂ ವಕೀಲರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥ ಮಾಡಿಕೊಳ್ಳಬಹುದು ಎಂದು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಾದ ತಿಪ್ಪೇಸ್ವಾಮಿ.ಎನ್ ತಿಳಿಸಿದ್ದಾರೆ.

## ಮಾ.7 ರಂದು ಪಿಸಿ, ಪಿಎನ್‌ಡಿಟಿ ಕಾಯ್ದೆ ಕುರಿತ ಸಭೆ

**ಹಂಪಿ ಟೈಮ್ಸ್ ಬಳ್ಳಾರಿ**
ಗರ್ಭ ಪೂರ್ವ ಮತ್ತು ಪ್ರಸವ ಪೂರ್ವ ಭ್ರೂಣ ಲಿಂಗ ಪತ್ತೆ ತಂತ್ರ ವಿಧಾನಗಳ (ಲಿಂಗ ಆಯ್ಕೆ ನಿಷೇಧ) ಪಿ.ಸಿ ಮತ್ತು ಪಿ.ಎನ್.ಡಿ.ಟಿ ಕಾಯ್ದೆ 1949ರ ಕುರಿತಂತೆ ಸಮೀಕ್ಷಿಸಲು ಪಿ.ಸಿ ಮತ್ತು ಪಿ.ಎನ್.ಡಿ.ಟಿ ಕಾಯ್ದೆಯ ಸಕ್ಷಮ ಪ್ರಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ಮಾ.7ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪಿಸಿ, ಪಿಎನ್‌ಡಿಟಿ ಕಾಯ್ದೆ ಕುರಿತ ಸಭೆ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ವೈ.ರಮೇಶ್ ಬಾಬು ತಿಳಿಸಿದ್ದಾರೆ.

## ಖಾಸಗಿ ಗೂಡ್ಸ್ ಲಾರಿ ಆಟೋ ಹಿಂಬದಿಗೆ ಡಿಕ್ಕಿ, ಒರ್ವ ವಿದ್ಯಾರ್ಥಿ ಸಾವು, ಹಲವರು ಗಾಯ

**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**
ಸಮೀಪದ ಡಣಾಪುರ ಗ್ರಾಮದ ಬಳಿ ನಡೆದ ಅಪಘಾತದಲ್ಲಿ 10 ಜನರು ಗಾಯಗೊಂಡು ಓರ್ವಮೃತನಾದ ಘಟನೆ ಮಂಗಳವಾರ ಸಂಜೆ ನಡೆದಿದೆ.
ಪಟ್ಟಣದಿಂದ ಹೊಸಪೇಟೆ ಕಡೆ ಪ್ರಯಾಣಿಕರನ್ನು ತುಂಬಿದ ಆಟೋದ ಹಿಂಬದಿಗೆ ಖಾಸಗಿ ಗೂಡ್ಸ್ ಲಾರಿ ಡಿಕ್ಕಿಹೊಡೆದಿದೆ. ಆಟೋದಲ್ಲಿದ್ದ 11 ಜನರು ಗಾಯಗೊಂಡಿದ್ದಾರೆ. ಹನುಮನಹಳ್ಳಿಯ ಬಿಸನಳ್ಳಿಮಲ್ಲೇಶ (17)ತೀವ್ರಗಾಯ ಗೊಂಡಿದ್ದನು, ಉಳಿದ ಗಾಯಾಳುಗಳನ್ನು ಪಟ್ಟಣ ಮತ್ತು ಹೊಸಪೇಟೆ ಸಾರ್ವಜನಿಕ ಆಸ್ಪತ್ರೆಗೆ ಚಿಕಿತ್ಸೆಗೆ ಸಾಗಿಸಲಾಗಿತ್ತು. ತೀವ್ರಗಾಯಗೊಂಡ ಮಲ್ಲೇಶನಿಗೆ ಬಳ್ಳಾರಿಯ ವಿಮ್ಸ್‌ಗೆಹೆಚ್ಚಿನಚಿಕಿತ್ಸೆಗೆಸಾಗಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾನೆ.
ದ್ವಿತಿಯ ಪಿಯುಸಿ ಪರೀಕ್ಷೆಗೆಂದು ಪಟ್ಟಣದ ಪರೀಕ್ಷಾಕೇಂದ್ರಕ್ಕೆ ಬಂದಿದ್ದ ಬಹುತೇಕ ವಿದ್ಯಾರ್ಥಿಗಳು ಈ ಆಟೋದಲ್ಲಿದ್ದರು. ಪರೀಕ್ಷೆ ಬರೆಯಲು ಬಂದ ವಿಧ್ಯಾರ್ಥಿಗಳು ಕೆಲವರು ಗಾಯಗೊಂಡಿದ್ದು ಕೆಲವು ದಾಖಲಾಗಿದ್ದರೆ, ಇನ್ನು ಕೆಲವರು ಡಿಸ್ಚಾರ್ಜ್ ಆಗಿದ್ದಾರೆ.
**ಗಾಯಗೊಂಡವರು:** ಆಕಾಶ(19), ನಾಗರಾಜ(48), ಗಾಳೆಮ್ಮ(32), ದುರುಗಮ್ಮ (30), ಸಂಜನಾ(17), ಹುಚ್ಚಮ್ಮ(43), ಮಲ್ಲಮ್ಮ(40), ದೀಪಾ,(17) ನಸೀಮಾ(24), ಲಕ್ಷ್ಮಿ(20), ಮೃತ ಮಲ್ಲೇಶ(17) ಎನ್ನಲಾಗಿದೆ. ಎಸ್ಪಿ ಶ್ರೀಹರಿಬಾಬು ಬಿ.ಎಲ್. ಘಟನಾ ಸ್ಥಳಕ್ಕೆ ತೆರಳಿ ಪರಿಶೀಲಿಸಿದರು. ಮರಿಯಮ್ಮನಹಳ್ಳಿ ಠಾಣಾ ಪೊಲೀಸರು ಗೂಡ್ಸ್ ಲಾರಿ ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡಿದ್ದಾರೆ.
ಅಪಘಾತದಲ್ಲಿ ತೀರ್ವಗಾಯಗೊಂಡ ಬಿಸನಳ್ಳಿ ಮಲ್ಲೇಶ ಓರ್ವ ವಿದ್ಯಾರ್ಥಿಯನ್ನು ಬಳ್ಳಾರಿ ವಿಮ್ಸ್ ಕಳುಹಿಸಲಾಗಿದೆ. ಮೂವರಿಗೆ ಮೈಕೈ ಗಾಯಗೊಂಡಿದ್ದು, ಇನ್ನುಳಿದವು ಡಿಸ್ಚಾರ್ಜ್ ಆಗಿದ್ದಾರೆ ಎಂದು ಡಿಎಚ್ಒ ಶಂಕರನಾಯ್ಕ ತಿಳೀಸಿದ್ದಾರೆ.

# ಒಂದೇ ದಿನದಲ್ಲಿ ನೀರಿನ ಸಮಸ್ಯೆ ಬಗೆಹರಿಸಿ

### ಸಿಎಂ ಸಿದ್ದರಾಮಯ್ಯ ಸೂಚನೆ | ಬರ ನಿರ್ವಹಣೆ ಕುರಿತು ಸಂವಾದ ಸಭೆ | ಗ್ರಾಮ, ವಾರ್ಡ್‌ನಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗಬಾರದು

**ಹಂಪಿ ಟೈಮ್ಸ್ ಬಳ್ಳಾರಿ**
ರಾಜ್ಯದ ಪ್ರತಿ ಗ್ರಾಮ ಮತ್ತು ವಾರ್ಡ್‌ಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗಬಾರದು. ಸಮಸ್ಯೆ ಉದ್ಭವಿಸಿದಲ್ಲಿ 24 ಗಂಟೆಗಳೊಳಗಾಗಿ ಟ್ಯಾಂಕರ್, ಖಾಸಗಿ ಕೊಳವೆಬಾವಿ ಸೇರಿದಂತೆ ಯಾವುದೇ ಜಲಮೂಲಗಳಿಂದ ನೀರು ಪೂರೈಸಲು ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಅವರು ಇಂದು, ಗೃಹ ಕಚೇರಿ ಕೃಷ್ಣಾದಲ್ಲಿ ರಾಜ್ಯದಲ್ಲಿ ಬರ ಪರಿಸ್ಥಿತಿ ನಿರ್ವಹಣೆ ಕುರಿತು ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದರು.

ಹಿಂಗಾರು ಹಾಗೂ ಮುಂಗಾರು ಮಳೆ ಕೊರತೆಯಿಂದಾಗಿ ಭಾರಿ ಪ್ರಮಾಣದ ಬರಗಾಲ ಉಂಟಾಗಿದೆ. ಸುಮಾರು 48 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಹಾನಿಯಾಗಿದೆ. ಏಪ್ರೀಲ್ ಮತ್ತು ಮೇ ತಿಂಗಳಲ್ಲಿ ಬರುವ ತೀವ್ರಬರಗಾಲವನ್ನುಎದುರಿಸಲು ಸಜ್ಜಾಗಬೇಕಿದೆ ಎಂದು ತಿಳಿಸಿದರು. ಪ್ರಸ್ತುತದಲ್ಲಿ ಇರುವ ಪರಿಸ್ಥಿತಿಯನ್ನು ಹೇಗೆ ನಿಭಾಯಿಸಬೇಕು ಮತ್ತು ಮುಂಬರುವ ಸಮಸ್ಯೆಗಳನ್ನು ಹೇಗೆ ಎದುರಿಸಬೇಕು ಎಂಬುದಕ್ಕೆ ಸೂಕ್ತ ಯೋಜನೆ ರೂಪಿಸಬೇಕು ಎಂದು ಜಿಲ್ಲಾಧಿಕಾರಿಗಳಿಗೆ, ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಮಾಧ್ಯಮಗಳಲ್ಲಿ ಪ್ರಕಟವಾಗುವ ಜನರ ಸಮಸ್ಯೆಗಳ ಕುರಿತ ವರದಿಗಳನ್ನು ಪರಿಶೀಲಿಸಿ, ಅವುಗಳಿಗೆ ತಕ್ಷಣವೇ ಸ್ಪಂದಿಸಬೇಕು ಎಂದು ಸೂಚಿಸಿದರು.



ಬರಗಾಲದಿಂದ ಜನರು ಗುಳೆ ಹೋಗುವುದನ್ನು ತಪ್ಪಿಸಬೇಕು. ಈ ಕುರಿತು ಜಿಲ್ಲಾಧಿಕಾರಿಗಳು, ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು, ಗ್ರಾಪಂ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಕಾರ್ಯಪ್ರವೃತ್ತರಾಗಬೇಕು ಎಂದು ಮುಖ್ಯಮಂತ್ರಿಗಳು ಹೇಳಿದರು.

ಶೀಘ್ರದಲ್ಲೇ ಚುನಾವಣಾ ನೀತಿಸಂಹಿತೆ ಜಾರಿಯಾಗಲಿರುವುದರಿಂದ ಚುನಾವಣಾ ಕೆಲಸದ ಜೊತೆಗೆ ಬರ ನಿರ್ವಹಣೆಯನ್ನು ನಿರ್ಲಕ್ಷಿಸಬಾರದು. ಬರನಿರ್ವಹಣೆಗೆ ನೀತಿಸಂಹಿತೆಯು ಅಡ್ಡಿಯಾಗುವುದಿಲ್ಲ ಎಂದು ತಿಳಿಸಿದರು.

**ಕುಡಿಯುವ ನೀರಿನ ಪೂರೈಕೆ ಸಮರ್ಪಕವಾಗಿರಲಿ:**
ಮುಖ್ಯಮಂತ್ರಿಯವರ ವಿಡಿಯೋ ಸಂವಾದ ಸಭೆಯ ಬಳಿಕ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು, ಬೇಸಿಗೆ ಹಿನ್ನೆಲೆಯಲ್ಲಿ ಪಟ್ಟಣ, ಗ್ರಾಮ ಹಾಗೂ ಹಳ್ಳಿಗಳಲ್ಲಿ ಕುಡಿಯುವ ನೀರಿನ ಪೂರೈಕೆ ಸಮಪರ್ಕವಾಗಿರಬೇಕು. ನಿರ್ವಹಣೆಯಲ್ಲಿ ಯಾವುದೇ ಲೋಪವಾಗುವಂತಿಲ್ಲ ಎಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯಲ್ಲಿ ಜಾನುವಾರುಗಳಿಗೆ ಮೇವಿನ ಕೊರತೆಯಾಗಬಾರದು. ಅಗತ್ಯ ಮೇವಿನ ದಾಸ್ತಾನು ಇಟ್ಟುಕೊಳ್ಳಬೇಕು. ಮೇವು ಅಂತರ್ ಜಿಲ್ಲಾ ಸಾಗಾಣಿಕೆ ಕುರಿತು ನಿಗಾವಹಿಸಬೇಕು ಎಂದು ಪಶುಸಂಗೋಪನಾ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಈಗಾಗಲೇ ಜಿಲ್ಲೆಯ ರೈತರಿಗೆ ಮೊದಲ ಹಂತದ ಬರ ಪರಿಹಾರ ಹಣ ಜಮೆಯಾಗಿದ್ದು, ಬರ ಪರಿಹಾರ ಪಡೆಯದ ಅರ್ಹ ರೈತರನ್ನು ಗುರುತಿಸಿ ಫ್ರೂಟ್ಸ್ ತಂತ್ರಾಂಶದಲ್ಲಿ ನೋಂದಾಯಿಸಿಕೊಳ್ಳುವಂತೆ ಕ್ರಮವಹಿಸಬೇಕು ಎಂದು ಕೃಷಿ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಬಳ್ಳಾರಿ ನಗರದಲ್ಲಿ ಕುಡಿಯುವ ನೀರಿಗೆ ಕೊರತೆಯಾಗಬಾರದು. ಅಗತ್ಯವಿದ್ದಲ್ಲಿ ಕೊಳವೆ ಬಾವಿ ಕೊರೆಸಲು ಕ್ರಮಕೈಗೊಳ್ಳಬೇಕು ಎಂದು ಮಹಾನಗರ ಪಾಲಿಕೆ ಆಯುಕ್ತರಿಗೆ ತಿಳಿಸಿದರು.

**1077 ಸಹಾಯವಾಣಿ ಸಂಖ್ಯೆಗೆ ಸಂಪರ್ಕಿಸಿ:**
ಜಿಲ್ಲೆಯಲ್ಲಿ ಕುಡಿಯುವ ನೀರು, ಜಾನುವಾರುಗಳಿಗೆ ಮೇವಿನ ಸಮಸ್ಯೆ ಕುರಿತಂತೆ ಇನ್ನಿತರೆ ಸಮಸ್ಯೆಗಳಿದ್ದಲ್ಲಿ, ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ 1077 ಸಹಾಯವಾಣಿ ಸಂಖ್ಯೆ ಆರಂಭಿಸಲಾಗಿದ್ದು, ಕರೆ ಮಾಡಬಹುದು. ಇಲ್ಲವೇ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಚೇರಿಗೆ ಸಂಪರ್ಕಿಬಹುದು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಮಿಶ್ರಾ ಅವರು ಹೇಳಿದರು.

ಈ ವೇಳೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರ್ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

# ಕೌಶಲ್ಯ ಉನ್ನತೀಕರಣ ತರಬೇತಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**
ಡಾ.ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ವತಿಯಿಂದ 2023-24 ನೇ ಸಾಲಿನಡಿ ನಿಗಮದ ಕೌಶಲ್ಯ ಉನ್ನತೀಕರಣ ತರಬೇತಿ ಪಡೆಯಲು ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಲಿಡ್‌ಕರ್ ಸಂಸ್ಥೆಯ ಜಿಲ್ಲಾ ಸಂಯೋಜಕರು ತಿಳಿಸಿದ್ದಾರೆ. ಪಿ.ಯು.ಸಿ ಮತ್ತು ಡಿಪ್ಲೋಮಾ ಪೂರ್ಣಗೊಳಿಸಿದ ಚರ್ಮಕುಶಲ ಕರ್ಮಿಗಳಿಗೆ ಉತ್ತರಪ್ರದೇಶದ ಆಗ್ರಾದಲ್ಲಿ 60 ದಿನಗಳ ಕೌಶಲ್ಯ ಉನ್ನತೀಕರಣ ತರಬೇತಿ ನೀಡಲಾಗುವುದು. ಅರ್ಜಿ ಸಲ್ಲಿಸಲು ಮಾರ್ಚ್ 12 ಕೊನೆಯ ದಿನವಾಗಿರುತ್ತದೆ. ತರಬೇತಿ ಪಡೆಯಲು ಆಸಕ್ತರು ಆಧಾರ್‌ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಪಡಿತರ ಚೀಟಿ, ಗುರುತಿನ ಚೀಟಿ, ಬ್ಯಾಂಕ್ ಖಾತೆಯ ಪ್ರತಿ, 02 ಪಾಸ್ ಫೋಟೋ ಹಾಗೂ ಇತರೆ ದಾಖಲಾತಿಗಳ ವಿವರದೊಂದಿಗೆ ಅರ್ಜಿಯನ್ನು ನಗರದ ಮೋತಿ ವೃತ್ತದ ಬುಡಾ ಕಾಂಪ್ಲೆಕ್ಸ್‌ನ ಲಿಡ್‌ಕರ್ ಲೆದರ್ ಎಂಪೋರಿಯಂ, ಶಾಪ್ ನಂ. 24, ಗ್ರೌಂಡ್ ಫ್ಲೋರ್, ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂ:08392-271741, ಮೊ:9480886274, 7676591259 ಗೆ ಸಂಪರ್ಕಿಸಬಹುದು.

**ಬೇಕಾಗಿದ್ದಾರೆ**
ಪಾರ್ಟ್ ಟೈಮ್ / ಫುಲ್ ಟೈಮ್ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ. ಆಸಕ್ತರು ಕೂಡಲೇ ಸಂಪರ್ಕಿಸಿ
**ಕುಶಾಲ್ ಟೆಲಿ ಮೊಬೈಲ್ಸ್**
Wholesale Dealers in All Brands second hand Mobiles
ರಾಮಾ ಟಾಕೀಸ್ ಹತ್ತಿರ, ಭಾರತ್ ಪೆಟ್ರೋಲ್ ಬಂಕ್ ಎದುರುಗಡೆ, ಹೊಸಪೇಟೆ-583201
M:99029 00085

HAMPI TIMES
Kannada Daily
ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
On This women's day
We're Offering a
50%
DISCOUNT FOR WISHERS



8 March, 2024
PRINT & DIGITAL E-PAPER
This discount is applicable for Women's Day Wishes!
BOOK YOUR ADS BEFORE 6TH MARCH
M: 94486 33038
Email: hampitimes@gmail.com
Advantages to combining print and digital advertising:
Increased Brand Awareness
Local & Broader Audience reach



Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA